Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1 | नई दिल्ली सोमवार, दिसम्बर 22, 1986 | पुष्य 1, 1908 (शक) | खण्ड–6 |
| No. 1 | New Delhi Monday, December 22, 1986 | Pushya 1, 1908 (Saka) | Vol. 6 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಡಿಸೆಂಬರ್ ೨೨, ೧೯೮೬ | ಪುಷ್ಯ ೧, ೧೯೦೮ (ಶಕ) | ಸಂಪುಟ ೬ |

## MINISTRY OF LAW AND JUSTICE

(Legislative Department)

New Delhi, October 30, 1986

The translations in Kannada of the following namely—(1) The All Idia Services Act, 1951 (2) The Muslim Personal Law (Shariat) Application Act, 1937 (3) The Identification of Prisoners Act, 1920 (4) The Government Saving Certificates Act, 1959 (5) The Indian Fisheries Act, 1897 (6) The Indian Christian Marriage Act, 1872 (7) The Census Act, 1948 (8) The Seamen's Provident Fund Act, 1966 (9) The Asian Development Bank Act, 1966 10) The Official Secrets Act, 1923.

ಕೆಳಕಂಡ ಅಧಿನಿಯಮಗಳು ಎಂದರೆ (೧) ಅಖಿಲ ಭಾರತ ಸೇವಾ ಅಧಿನಿಯಮ, ೧೯೫೧ (೨) ಮುಸ್ಲಿಮರ ವೈಯಕ್ತಿಕ ಕಾನೂನು (ಷರೀಯತ್) ಅನ್ವಯ ಅಧಿನಿಯಮ, ೧೯೩೭ (೩) ಬಂಧಿಗಳನ್ನು ಗುರ್ತಿಸುವ ಅಧಿನಿಯಮ, ೧೯೨೦ (೪) ಸರ್ಕಾರೀ ಉಳಿತಾಯ ಪ್ರಮಾಣ ಪತ್ರ ಅಧಿನಿಯಮ, ೧೯೫೯ (೫) ಭಾರತ ಮೀನುಗಾರಿಕೆ ಅಧಿನಿಯಮ, ೧೮೯೭ (೬) ಭಾರತೀಯ ಕ್ರೈಸ್ತರ ವಿವಾಹ ಅಧಿನಿಯಮ, ೧೮೭೨ (೭) ಜನಗಣತಿ ಅಧಿನಿಯಮ, ೧೯೪೮ (೮) ನಾವಿಕರ ಭವಿಷ್ಯ ನಿಧಿ ಅಧಿನಿಯಮ, ೧೯೬೬ (೯) ಏಷ್ಯಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, ೧೯೬೬ (೧೦) ಸರ್ಕಾರಿ ರಹಸ್ಯ ಅಧಿನಿಯಮ, ೧೯೨೩.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ಭಾರತೀಯ ಕ್ರೈಸ್ತರ ವಿವಾಹ ಅಧಿನಿಯಮ, 1872

(1872ರ ಅಧಿನಿಯಮ ಸಂಖ್ಯೆ 15) [18ನೇ ಜುಲೈ 1972]

ಭಾರತದಲ್ಲಿ ಕ್ರೈಸ್ತರ ವಿವಾಹಗಳನ್ನು ಅನುಷ್ಠಾಪಿಸುವುದಕ್ಕೆ ಸಂಬಂಧಿಸಿದ ಕಾನೂನನ್ನು ಕ್ರೋಢೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

ಪ್ರಸ್ತಾವನೆ.—ಭಾರತದಲ್ಲಿ ಕ್ರೈಸ್ತ ಧರ್ಮವನ್ನು ಅಂಗೀಕರಿಸುವ ವ್ಯಕ್ತಿಗಳ ವಿವಾಹಗಳನ್ನು ಅನುಷ್ಠಾಪಿಸುವುದಕ್ಕೆ ಸಂಬಂಧಿಸಿದ ಕಾನೂನನ್ನು ಕ್ರೋಢೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ,

ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ.–

## ಪ್ರಾರಂಭಿಕ

1. ಚಿಕ್ಕ ಹೆಸರು.—ಈ ಅಧಿನಿಯಮವನ್ನು ಭಾರತೀಯ ಕ್ರೈಸ್ತರ ವಿವಾಹ ಅಧಿನಿಯಮ, 1872 ಎಂದು ಕರೆಯತಕ್ಕದು.

ವ್ಯಾಪ್ತಿ.—ಇದು 1956ರ ನವೆಂಬರ್ 1ರ ನಿಕಟಪೂರ್ವದಲ್ಲಿ ತಿರುವಾಂಕೂರು, ಕೊಚ್ಚಿನ್, ಮಣಿಪುರ ಮತ್ತು ಜಮ್ಮು ಮತ್ತು ಕಾಶ್ಮೀರ ರಾಜ್ಯಗಳಲ್ಲಿ ಒಳಗೊಂಡಿದ್ದ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

2 (ನಿರಸಿತವಾದ ಅಧಿನಿಯಮಿತಿಗಳು) ನಿರಸನಗೊಳಿಸುವ ಅಧಿನಿಯಮ, 1938 (1938ರ 1) ಪ್ರಕರಣ 2 ಮತ್ತು ಅನುಸೂಚಿ ಭಾಗ 1 ರಿಂದ ನಿರಸಿತವಾಗಿದೆ.

3. ಅರ್ಥ ವಿವರಣೆ ಖಂಡ.—ಈ ಅಧಿನಿಯಮದಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು.–

''ಇಂಗ್ಲೆಂಡಿನ ಚರ್ಚ್" ಮತ್ತು "ಆಂಗ್ಲಿಕನ್'' ಎಂಬುದರ ಅರ್ಥ ಮತ್ತು ಅನ್ವಯ ಕಾನೂನಿನ ಮೂಲಕ ಸ್ಥಾಪಿತವಾಗಿರುವಂತೆ ಇಂಗ್ಲೆಂಡಿನ ಚರ್ಚ್.

"ಸ್ಕಾಟ್ಲೆಂಡಿನ ಚರ್ಚ್'' ಎಂದರೆ, ಕಾನೂನಿನ ಮೂಲಕ ಸ್ಥಾಪಿತವಾಗಿರುವಂಥ ಸ್ಕಾಟ್ಲೆಂಡಿನ ಚರ್ಚ್,

''ರೋಮಿನ ಚರ್ಚ್'' ಮತ್ತು ''ರೋಮನ್ ಕ್ಯಾಥೋಲಿಕ್'' ಎಂಬುದರ ಅರ್ಥ ಮತ್ತು ಅನ್ವಯ ರೋಮಿನ ಪೋಪನನ್ನು ಅದರ ಆಧ್ಯಾತ್ಮಿಕ ಗುರುವೆಂದು ಪರಿಗಣಿಸುವ ಚರ್ಚ್,

"ಚರ್ಚ್" ಎಂಬುದರಲ್ಲಿ ಕ್ರೈಸ್ತರ ಯಾವುದೇ ಚಿಕ್ಕ ದೇವಾಲಯವು ಅಥವಾ ಕ್ರೈಸ್ತರು ಸಾರ್ವಜನಿಕ ಪೂಜೆಗಾಗಿ ಸಾಮಾನ್ಯವಾಗಿ ಉಪಯೋಗಿಸುವ ಇತರ ಕಟ್ಟಡವು ಒಳಗೊಳ್ಳುತ್ತದೆ.

''ಭಾರತ'' ಎಂದರೆ ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯ ಕ್ಷೇತ್ರಗಳು; "ಅಪ್ರಾಪ್ತ ವಯಸ್ಕ'' ಎಂದರೆ ಇಪ್ಪತ್ತೊಂದು ವರ್ಷ ವಯಸ್ಸು ಪೂರ್ಣವಾಗಿರದ ಮತ್ತು ವಿಧುರನಲ್ಲದ ಅಥವಾ ವಿಧವೆಯಲ್ಲದ ವ್ಯಕ್ತಿ.

''ಕ್ರೈಸ್ತರು'' ಎಂಬ ಪದಕ್ಕೆ ಕ್ರೈಸ್ತ ಧರ್ಮವನ್ನು ಅಗೀಕರಿಸುವ ವ್ಯಕ್ತಿಗಳು ಎಂದರ್ಥ,

ಮತ್ತು ''ಭಾರತೀಯ ಕ್ರೈಸ್ತರು'' ಎಂಬ ಪದಾವಳಿಯು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಭಾರತ ದೇಶೀಯರ ಕ್ರೈಸ್ತ ವಂಶಜರನ್ನು ಹಾಗೂ ಅಂಥ ಮತಾಂತರಗೊಂಡವರನ್ನು ಒಳಗೊಳ್ಳುತ್ತದೆ.

ಜನನ, ಮರಣ ಮತ್ತು ವಿವಾಹಗಳ ರಿಜಿಸ್ಟ್ರಾರ್–ಜನರಲ್ ಎಂದರೆ 1886ರ ಜನನ. ಮರಣ ಮತ್ತು ವಿವಾಹಗಳ ನೋಂದಣಿ ಅಧಿನಿಯಮದ (1886ರ 6) ಮೇರೆಗೆ ನೇಮಕಗೊಂಡ ಜನನ ಮರಣ ಮತ್ತು ವಿವಾಹ ರಿಜಿಸ್ಟ್ರಾರ್ ಜನರಲ್,

ಇದನ್ನು ಪಾಂಡಿಚೇರಿ ಸಂಘ ರಾಜ್ಯ ಕ್ಷೇತ್ರದ ಪಾಂಡಿಚೇರಿ (ಕಾನೂನುಗಳ ವಿಸ್ತರಣೆ) ಅಧಿನಿಯಮ, 1968 (1968ರ 26)ರ ಮೂಲಕ, ಕೆಳಕಂಡ ಪರಂತುಕಕ್ಕೆ ಒಳಪಟ್ಟು ವಿಸ್ತರಿಸಲಾಗಿದೆ.—

ಪರಂತು ಈ ಅಧಿನಿಯಮದಲ್ಲಿ ಒಳಗೊಂಡಿರುವುದು, ಯಾವುದೂ ಪಾಂಡಿಚೇರಿ ಸಂಘ ರಾಜ್ಯದ ರನೋನ್ಸಾಗಳಿಗೆ ಅನ್ವಯಿಸತಕ್ಕದಲ್ಲ,

## ಭಾಗ–I

### ಯಾವ ವ್ಯಕ್ತಿಗಳು ವಿವಾಹಗಳನ್ನು ಅನುಷ್ಠಾಪಿಸಬಹುದು

4. ಈ ಅಧಿನಿಯಮಕ್ಕೆ ಅನುಸಾರವಾಗಿ ವಿವಾಹಗಳನ್ನು ಅನುಷ್ಠಾಪಿಸಬೇಕು.—ಯಾವ ವ್ಯಕ್ತಿಗಳ ಘಟಕ ಒಬ್ಬ ಕ್ರೈಸ್ತನಾಗಿರುವನೋ ಅಥವಾ ಇಬ್ಬರು ಕ್ರೈಸ್ತರಾಗಿರುವರೋ ಆ ವ್ಯಕ್ತಿಗಳಲ್ಲಿ ಒಬ್ಬನು ಅಥವಾ ಇಬ್ಬರೂ ನಡುವಣ ಪ್ರತಿಯೊಂದು ವಿವಾಹವನ್ನು ಮುಂದೆ ಬರುವ ಪ್ರಕರಣದ ಉಪಬಂಧಗಳಿನುಸಾರವಾಗಿ ಅನುಷ್ಠಾಪಿಸತಕ್ಕದು ಮತ್ತು ಅಂಥ ಉಪಬಂಧಗಳಿಗನುಸಾರವಾಗಿಯಲ್ಲದ ಅನ್ಯಥಾ ಅನುಷ್ಠಾಪಿಸಲಾದಂಥ ಯಾವುದೇ ವಿವಾಹವು ಶೂನ್ಯವಾಗತಕ್ಕದು.

5. **ಯಾವ ವ್ಯಕ್ತಿಗಳು ವಿವಾಹಗಳನ್ನು ವಿಧಿವತ್ತಾಗಿ ನೆರವೇರಿಸಬಹುದು.**—ಭಾರತದಲ್ಲಿ ವಿವಾಹಗಳನ್ನು

(1) ಬಿಷಪ್ಪಿನಿಂದ ದೀಕ್ಷೆಯನ್ನು ಪಡೆದ ಯಾವನೇ ವ್ಯಕ್ತಿಯು ಅನುಷ್ಠಾಪಿಸಬಹುದು:

ಪರಂತು ಅವನು ಯಾವ ಚರ್ಚಿನ ಗುರುವಾಗಿರುವನೋ/ಆ ಚರ್ಚಿನ ನಿಯಮಗಳಿಗೆ, ಸಂಸ್ಕಾರಗಳಿಗೆ, ಕಾರ್ಯಾಚರಣೆಗಳಗೆ ಮತ್ತು ರೂಢಿಗಳಿಗೆ ಅನುಸಾರವಾಗಿ ವಿವಾಹವನ್ನು ಅನುಷ್ಠಾಪಿಸತಕ್ಕುದು.

(2) ಸ್ಕಾಟ್ಲೆಂಡಿನ ಚರ್ಚಿನ ಯಾವನೇ ಪಾದ್ರಿಯು ಅನುಷ್ಠಾಪಿಸಬಹುದು. ಪರಂತು ಅಂಥ ವಿವಾಹವನ್ನು ಸ್ಕಾಟ್ಲೆಂಡಿನ ಚರ್ಚಿನ ನಿಯಮಗಳಿಗೆ, ಸಂಸ್ಕಾರಗಳಿಗೆ, ಕಾರ್ಯಾಚರಣೆಗಳಿಗೆ ಮತ್ತು ರೂಢಿಗಳಿಗೆ ಅನುಸಾರವಾಗಿ ವಿಧಿವತ್ತಾಗಿ ನೆರವೇರಿಸತಕ್ಕುದು.

(3) ವಿವಾಹಗಳನ್ನು ವಿಧಿವತ್ತಾಗಿ ನೆರವೇರಿಸುವುದಕ್ಕೆ ಈ ಅಧಿನಿಯಮದ ಮೇರೆಗೆ ಲೈಸನ್ಸ್ ಪಡೆದ ಯಾವನೇ ಕ್ರೈಸ್ತ ಧರ್ಮಗುರುವು ವಿಧಿವತ್ತಾಗಿ ನೆರವೇರಿಸಬಹುದು.

(4) ಈ ಅಧಿನಿಯಮದ ಮೇರೆಗೆ ನೇಮಕಗೊಂಡ ವಿವಾಹ ರಿಜಿಸ್ಟ್ರಾರರಿಂದ ಅಥವಾ ಅವನ ಸಮಕ್ಷಮದಲ್ಲಿ ವಿಧಿವತ್ತಾಗಿ ನೆರವೇರಿಸಬಹುದು.

(5) ಭಾರತೀಯ ಕ್ರೈಸ್ತರ ನಡುವಣ ವಿವಾಹದ ಪ್ರಮಾಣ ಪತ್ರಗಳನ್ನು ಕೊಡುವುದಕ್ಕೆ ಈ ಅಧಿನಿಯಮದ ಮೇರೆಗೆ ಲೈಸನ್ಸ್ ಪಡೆದಿರುವ ಯಾವನೇ ವ್ಯಕ್ತಿಯು ವಿಧಿವತ್ತಾಗಿ ನೆರವೇರಿಸಬಹುದು.

6. **ವಿವಾಹಗಳನ್ನು ಅನುಷ್ಠಾಪಿಸುವುದಕ್ಕೆ ಲೈಸನ್ಸ್‌ಗಳ ನೀಡಿಕೆ ಮತ್ತು ರದ್ದುಗೊಳಿಸುವಿಕೆ.**—ರಾಜ್ಯ ಸರ್ಕಾರವು ತನ್ನ ಆಡಳಿತದಲ್ಲಿರುವ ಪ್ರದೇಶಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಅಂಥ ಪ್ರದೇಶಗಳೊಳಗೆ ವಿವಾಹಗಳನ್ನು ವಿಧಿವತ್ತಾಗಿ ನೆರವೇರಿಸಲು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕ್ರೈಸ್ತಧರ್ಮ ಗುರುಗಳಿಗೆ ಲೈಸೆನ್ಸ್‌ಗಳನ್ನು ನೀಡಬಹುದು ಮತ್ತು ಅದೇ ರೀತಿಯ ಅಧಿಸೂಚನೆಯ ಮೂಲಕ ಅಂಥ ಲೈಸೆನ್ಸ್‌ಗಳನ್ನು ರದ್ದುಗೊಳಿಸಬಹುದು.

7. **ವಿವಾಹ ರಿಜಿಸ್ಟ್ರಾರರು.**—ರಾಜ್ಯ ಸರ್ಕಾರವು, ಹೆಸರಿಸುವಂಥ ಅಥವಾ ತತ್ಕಾಲದಲ್ಲಿ ಯಾವುದೇ ಪದವನ್ನು ಧಾರಣ ಮಾಡಿರುವಂಥ ಒಬ್ಬ ಅಥವಾ ಹೆಚ್ಚಿನ ಕ್ರೈಸ್ತನನ್ನು ತನ್ನ ಆಡಳಿತಕ್ಕೊಳಪಟ್ಟಿರುವ ಯಾವುದೇ ಜಿಲ್ಲೆಗೆ ವಿವಾಹ ರಿಜಿಸ್ಟ್ರಾರನ್ನಾಗಿ ಅಥವಾ ವಿವಾಹ ರಿಜಿಸ್ಟ್ರಾರರುಗಳನ್ನಾಗಿ ನೇಮಿಸಬಹುದು.

**ಹಿರಿಯ ವಿವಾಹ ರಿಜಿಸ್ಟ್ರಾರ್.**—ಯಾವುದೇ ಜಿಲ್ಲೆಯಲ್ಲಿ ಒಬ್ಬನಿಗಿಂತ ಹೆಚ್ಚಿನ ವಿವಾಹ ರಿಜಿಸ್ಟ್ರಾರರುಗಳಿರುವಲ್ಲಿ ರಾಜ್ಯ ಸರ್ಕಾರವು ಅವರಲ್ಲಿ ಒಬ್ಬನನ್ನು ಹಿರಿಯ ವಿವಾಹ ರಿಜಿಸ್ಟ್ರಾರನನ್ನಾಗಿ ನೇಮಿಸತಕ್ಕುದು.

**ಮ್ಯಾಜಿಸ್ಟ್ರೇಟನು ಯಾವಾಗ ವಿವಾಹ ರಿಜಿಸ್ಟ್ರಾರನಾಗಿರತಕ್ಕುದು.**—ಜಿಲ್ಲೆಯಲ್ಲಿ ಒಬ್ಬನೇ ವಿವಾಹ ರಿಜಿಸ್ಟ್ರಾರನಿರುವಾಗ ಮತ್ತು ಅಂಥ ರಿಜಿಸ್ಟ್ರಾರನು ಅಂಥ ಜಿಲ್ಲೆಯಿಂದ ಗೈರು ಹಾಜರಾಗಿರುವ ಅಥವಾ ಅನಾರೋಗ್ಯದಿಂದಿರುವಾಗ, ಅಥವಾ ಅವನ ಪದವು ತಾತ್ಕಾಲಿಕವಾಗಿ ಖಾಲಿಯಾಗಿರುವಾಗ ಜಿಲ್ಲೆಯ ಮ್ಯಾಜಿಸ್ಟ್ರೇಟನು ಅಂಥ ಗೈರು ಹಾಜರಿ, ಅನಾರೋಗ್ಯ ಅಥವಾ ತಾತ್ಕಾಲಿಕವಾಗಿ ಸ್ಥಾನವು ಖಾಲಿಯಾಗಿರುವ ಕಾಲದಲ್ಲಿ ಆ ಜಿಲ್ಲೆಯ ವಿವಾಹ ರಿಜಿಸ್ಟ್ರಾರನಂತೆ ಕಾರ್ಯ ನಿರ್ವಹಿಸತಕ್ಕುದು ಮತ್ತು ವಿವಾಹ ರಿಜಿಸ್ಟ್ರಾರ್‌ನಾಗಿರತಕ್ಕುದು.

8. **ಭಾರತೀಯ ರಾಜ್ಯಗಳಲ್ಲಿ ವಿವಾಹ ರಿಜಿಸ್ಟ್ರಾರರು.**—ಅ. ಅ. 1950 ರಿಂದ ನಿರಸಿತವಾಗಿದೆ.

9. **ಭಾರತೀಯ ಕ್ರೈಸ್ತರುಗಳ ನಡುವಣ ವಿವಾಹದ ಪ್ರಮಾಣ ಪತ್ರಗಳನ್ನು ಕೊಡುವ ವ್ಯಕ್ತಿಗಳಿಗೆ ಲೈಸೆನ್ಸ್ ಕೊಡುವುದು.**—ರಾಜ್ಯ ಸರ್ಕಾರವು ಹೆಸರಿಸುವ ಮೂಲಕವಾಗಲಿ ಅಥವಾ ತತ್ಕಾಲದಲ್ಲಿ ಯಾವುದೇ ಪದವನ್ನು ಧಾರಣ ಮಾಡಿರುವಂಥ ಯಾವನೇ ಕ್ರೈಸ್ತನನ್ನು ಅವನು ಭಾರತೀಯ ಕ್ರೈಸ್ತರ ನಡುವಣ ವಿವಾಹದ ಪ್ರಮಾಣ ಪತ್ರಗಳನ್ನು ಕೊಡುವುದಕ್ಕೆ ಅಧಿಕೃತಗೊಳಿಸಿ ಅವನಿಗೆ ಲೈಸೆನ್ಸ್‌ನ್ನು ಕೊಡಬಹುದು.

ಅಂಥ ಯಾವುದೇ ಲೈಸನ್ಸನ್ನು ಕೊಟ್ಟಿರುವ ಪ್ರಾಧಿಕಾರಿಗಳು ರದ್ದುಗೊಳಿಸಬಹುದು ಮತ್ತು ಅಂಥ ಪ್ರತಿಯೊಂದು ನೀಡಿಕೆಯನ್ನು ಮತ್ತು ರದ್ದುಗೊಳಿಸುವಿಕೆಯನ್ನು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸತಕ್ಕುದು.

## ಭಾಗ-II

### ವಿವಾಹಗಳನ್ನು ಅನುಷ್ಠಾಪಿಸಬಹುದಾದ ಕಾಲ ಮತ್ತು ಸ್ಥಳ

10. **ವಿವಾಹವನ್ನು ಅನುಷ್ಠಾಪಿಸುವುದಕ್ಕೆ ಕಾಲ :**—ಈ ಅಧಿನಿಯಮದ ಮೇರೆಗೆ ಪ್ರತಿಯೊಂದು ವಿವಾಹವನ್ನು ಬೆಳಗ್ಗೆ ಆರು ಗಂಟೆ ಮತ್ತು ಸಾಯಂಕಾಲ ಏಳು ಗಂಟೆಗಳ ನಡುವೆ ಅನುಷ್ಠಾಪಿಸತಕ್ಕುದು.

**ಅಪವಾದಗಳು :**—ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ,

(1) ಬಿಷಪ್ಪಿನ ಆಡಳಿತ ಪ್ರಾಂತ, ಆ್ಯಂಗ್ಲಿಕನ ಬಿಷಪ್ಪಿನ ಅಥವಾ ಅವನ ಪ್ರತಿನಿಧಿಯ ಸಹಿ ಮತ್ತು ಮೊಹರಿನೊಡನೆ ಬೆಳಗ್ಗೆ ಆರು ಗಂಟೆ ಮತ್ತು ಸಾಯಂಕಾಲ ಏಳು ಗಂಟೆಯ ನಡುವೆಯಲ್ಲದೆ ಇತರ ಯಾವುದೇ ವೇಳೆಯಲ್ಲಿ ವಿಶೇಷ ಲೈಸನ್ಸಿನ ಮೇರೆಗೆ ಹಾಗೆ ಮಾಡುವುದಕ್ಕೆ ಅನುಮತಿ ಪಡೆದಿರುವ, ವಿವಾಹವನ್ನು ವಿಧಿವತ್ತಾಗಿ ನೆರವೇರಿಸುವ ಇಂಗ್ಲೆಂಡಿನ ಚರ್ಚಿನ, ಪಾದ್ರಿಗೆ, ಅಥವಾ

(2) ಅಂಥ ವಿವಾಹವನ್ನು ಹಾಗೆ ಅನುಷ್ಠಾಪಿಸಿರುವ ಬಿಷಪ್ಪಿನ ಆಡಳಿತ ಪ್ರಾಂತದ ಅಥವಾ ವಿಕರಿಯೆಟನ್ ರೋಮನ್ ಕ್ಯಾಥೊಲಿಕ್ ಬಿಷಪ್ಪಿನಿಂದ ಅಥವಾ ಅಂಥ ಲೈಸ್‌ನ್ಸನ್ನು ಕೊಡುವುದಕ್ಕೆ ಅದೇ ಬಿಷಪ್ಪಿನಿಂದ ಅಧಿಕೃತವಾಗಿದ್ದಂಥ ವ್ಯಕ್ತಿಯಿಂದ ಆ ಬಗ್ಗೆ ಸಾಮಾನ್ಯ ಅಥವಾ ವಿಶೇಷ ಲೈಸೆನ್ಸನ್ನು ಅವನು ಸ್ವೀಕರಿಸಿದ್ದು ಸಾಯಂಕಾಲ ಏಳರಿಂದ ಬೆಳಿಗ್ಗೆ ಆರು ಗಂಟೆಗಳ ನಡುವೆ ವಿವಾಹವನ್ನು ಅನುಷ್ಠಾಪಿಸಿರುವ ರೋಮನ ಚರ್ಚಿನ ಪ್ರಾದಿಗೆ, ಅಥವಾ

(3) ಸ್ಕಾಟ್‌ಲೆಂಡಿನ ಚರ್ಚಿನ ನಿಯಮಗಳಿಗೆ, ಸಂಸ್ಕಾರಗಳಿಗೆ, ಕರ್ಮಾಚರಣೆಗಳಿಗೆ ಮತ್ತು ರೂಢಿಗಳಿಗೆ ಅನುಸಾರವಾಗಿ ವಿವಾಹವನ್ನು ಅನುಷ್ಠಾಪಿಸುವ ಸ್ಕಾಟ್‌ಲೆಂಡಿನ ಚರ್ಚಿನ ಪಾದ್ರಿಗೆ ಅನ್ವಯಿಸತಕ್ಕದಲ್ಲ.

11. ವಿವಾಹವನ್ನು ಅನುಷ್ಠಾಪಿಸುವ ಸ್ಥಳ :–ಇಂಗ್ಲೆಂಡಿನ ಚರ್ಚಿನ ಯಾವ ಪಾದ್ರಿಯೇ ಆಗಲಿ,

ಅಂಥ ಸ್ಥಳದಿಂದ ಅತ್ಯಂತ ಹತ್ತಿರದ ರಸ್ತೆಯಿಂದ ಐದು ಮೈಲಿಗಳ ದೂರದೊಳಗೆ ಅಂಥ ಚರ್ಚು ಇಲ್ಲದ ಹೊರತು ಅಥವಾ

ಬಿಷಪ್ಪಿನ ಆಡಳಿತ ಪ್ರಾಂತದ ಅಥವಾ ಅವನ ಪ್ರತಿನಿಧಿಯ ಆ್ಯಂಗ್ಲಿಕನ್ ಬಿಷಪ್ಪಿನ ಸಹಿ ಮತ್ತು ಮೊಹರಿನೊಡನೆ ಹಾಗೆ ಮಾಡಲು ಅವನನ್ನು ಅಧಿಕೃತಗೊಳಿಸಿ ವಿಶೇಷ ಲೈಸೆನ್ಸನ್ನು ಅವನು ಸ್ವೀಕರಿಸಿದ್ದ ಹೊರತು,

ಇಂಗ್ಲೇಂಡಿನ ಚರ್ಚಿನ ರೀತಿಗಳಿಗನುಸಾರವಾಗಿ ಸಾಮಾನ್ಯವಾಗಿ ಪೂಜೆಯು ನಡೆಯುವ ಚರ್ಚಿನ ಹೊರತು ಇತರ ಯಾವ ಸ್ಥಳದಲ್ಲೇ ಆಗಲಿ ವಿವಾಹವನ್ನು ವಿಧಿವತ್ತಾಗಿ ನೆರವೇರಿಸತಕ್ಕದಲ್ಲ.

ವಿಶೇಷ ಲೈಸೆನ್ಸಿಗಾಗಿ ಫೀಜು :–ಅಂಥ ವಿಶೇಷ ಲೈಸನ್ಸಿಗಾಗಿ ಬಿಷಪ್ಪಿನ ಆಡಳಿತ ಪ್ರಾಂತದ ರಿಜಿಸ್ಟ್ರಾರನ್ನು ಸದರಿ ಬಿಷಪನು ಕಾಲಕಾಲಕ್ಕೆ ಅಧಿಕೃತಗೊಳಿಸುವಂಥ ಹೆಚ್ಚಿನ ಫೀಜನ್ನು ವಿಧಿಸಬಹುದು.

## ಭಾಗ–III

### ಈ ಅಧಿನಿಯಮದ ಮೇರೆಗೆ ಲೈಸೆನ್ಸು ಪಡೆದಿರುವ ಕ್ರೈಸ್ತಧರ್ಮಗುರುಗಳು ವಿವಾಹಗಳನ್ನು ಅನುಷ್ಠಾಪಿಸುವುದು

12. ಉದ್ದೇಶಿತ ವಿವಾಹದ ನೋಟೀಸು :–ಈ ಅಧಿನಿಯಮದ ಮೇರೆಗೆ ವಿವಾಹವನ್ನು ಅನುಷ್ಠಾಪಿಸುವುದಕ್ಕೆ ಲೈಸೆನ್ಸು ಪಡೆದಿರುವ ಧರ್ಮಗುರು ವಿವಾಹವನ್ನು ಅನುಷ್ಠಾಪಿಸಲು ಉದ್ದೇಶಿಸಿರುವಾಗ,

ಯಾವ ಕ್ರೈಸ್ತಧರ್ಮಗುರುವು ವಿವಾಹವನ್ನು ಅನುಷ್ಠಾಪಿಸಬೇಕೆಂದು ವಿವಾಹವಾಗಲುಉದ್ದೇಶಿಸುವ ವ್ಯಕ್ತಿಗಳಲ್ಲಿ ಒಬ್ಬನು ಅಥವಾ ಒಬ್ಬಳು ಅಪೇಕ್ಷಿಸುವನೋ ಅಥವಾ ಅಪೇಕ್ಷಿಸುವಳೋ ಅವನಿಗೆ ಇದಕ್ಕೆ ಅನುಬಂಧಿಸಿರುವ ಮೊದಲನೇ ಅನುಸೂಚಿಯಲ್ಲಿ ಒಳಗೊಂಡಿರುವ ನಮೂನೆಗನುಸಾರವಾಗಿ ಬರಹದಲ್ಲಿ ನೋಟೀಸನ್ನು ಕೊಡತಕ್ಕದು ಮತ್ತು ಅದರಲ್ಲಿ,

(ಕ) ವಿವಾಹವಾಗಲು ಉದ್ದೇಶಿಸುವ ಪ್ರತಿಯೊಬ್ಬ ವ್ಯಕ್ತಿಯ ಹೆಸರು ಮತ್ತು ಅಡ್ಡ ಹೆಸರು ಮತ್ತು ವೃತ್ತಿ ಅಥವಾ ಸ್ಥಿತಿಯನ್ನು;

(ಖ) ಅವರಲ್ಲಿ ಪ್ರತಿಯೊಬ್ಬರ ವಾಸಸ್ಥಳವನ್ನು;

(ಗ) ಪ್ರತಿಯೊಬ್ಬರೂ ಅಲ್ಲಿ ವಾಸಿಸಿದ್ದ ಕಾಲಾವಧಿಯನ್ನು; ಮತ್ತು

(ಘ) ವಿವಾಹವನ್ನು ವಿಧಿವತ್ತಾಗಿ ನೆರವೇರಿಸಬೇಕಾದ ಚರ್ಚ್ ಅಥವಾ ಖಾಸಗಿ ಸ್ಥಳವನ್ನು ನಮೂದಿಸತಕ್ಕದು:

ಪರಂತು ನೋಟೀಸಿನಲ್ಲಿ ನಮೂದಿಸಿರುವ ಸ್ಥಳದಲ್ಲಿ ಒಂದು ತಿಂಗಳಿಗಿಂತ ಹೆಚ್ಚಾಗಿ ಅಂಥ ವ್ಯಕ್ತಿಗಳಲ್ಲಿ ಯಾರೊಬ್ಬರಾದರೂ ವಾಸಿಸಿದ್ದರೆ, ಒಂದು ತಿಂಗಳು ಮತ್ತು ಮೇಲ್ಪಟ್ಟು ಅಲ್ಲಿ ಅವನು ಅಥವಾ ಅವಳು ವಾಸಿಸಿದ್ದರೆಂದು ಅದರಲ್ಲಿ ಹೇಳಬಹುದು.

13. ಅಂಥ ನೋಟೀಸಿನ ಪ್ರಕಟಣೆ :–ವಿವಾಹವಾಗಲು ಉದ್ದೇಶಿಸಿರುವ ವ್ಯಕ್ತಿಗಳು ಅದನ್ನು ಒಂದು ವಿಶಿಷ್ಟ ಚರ್ಚಿನಲ್ಲಿ ಅನುಷ್ಠಾಪಿಸಬೇಕೆಂದು ಅಪೇಕ್ಷಿಸಿದರೆ, ಮತ್ತು ಅಂಥ ನೋಟೀಸನ್ನು ಕೊಡಲಾಗಿರುವ ಕ್ರೈಸ್ತ ಧರ್ಮಗುರು ಅದರಲ್ಲಿ ಪೌರೋಹಿತ್ಯ ನಡೆಸಲು ಹಕ್ಕುಳ್ಳವನಾಗಿದ್ದರೆ, ಅವನು ಅಂಥ ಚರ್ಚಿನ ಯಾವುದಾದರೂ ಎದ್ದು ಕಾಣುವ ಭಾಗದಲ್ಲಿ ನೋಟೀಸನ್ನು ಅಂಟಿಸುವಂತೆ ಮಾಡತಕ್ಕದು.

ನೋಟೀಸಿನ ಹಿಂದಿರುಗಿಸುವಿಕೆ ಅಥವಾ ವರ್ಗಾವಣೆ :–ಅವನು ಅಂಥ ಚರ್ಚಿನಲ್ಲಿ ಗುರುವಿನಂತೆ ಪೌರೋಹಿತ್ಯ ನಡೆಸುವುದಕ್ಕೆ ಹಕ್ಕುಳ್ಳವನಾಗಿಲ್ಲದಿದ್ದರೆ, ತನ್ನ ಇಚ್ಛಾನುಸಾರ, ತನಗೆ ನೋಟೀಸನ್ನು ಕೊಟ್ಟ ವ್ಯಕ್ತಿಗೆ ಅದನ್ನು ಹಿಂದಿರುಗಿಸತಕ್ಕದು, ಅಥವಾ ಅದರಲ್ಲಿ ಪೌರೋಹಿತ್ಯ ನಡೆಸುವುದಕ್ಕೆ ಹಕ್ಕುಳ್ಳ ಇತರ ಗುರುವಿಗೆ ಅದನ್ನು ಕೊಡತಕ್ಕದು, ಅವನು ಆ ಬಳಿಕ ಮೇಲೆ ಹೇಳಿದಂತೆ ನೋಟಿಸನ್ನು ಅಂಟಿಸುವಂತೆ ಮಾಡತಕ್ಕದು.

14. ಖಾಸಗಿ ನಿವಾಸದಲ್ಲಿ ಉದ್ದೇಶಿತ ವಿವಾಹದ ನೋಟೀಸು :–ವಿವಾಹವನ್ನು ಖಾಸಗಿ ನಿವಾಸದಲ್ಲಿ ಅನುಷ್ಠಾಪಿಸಬೇಕೆಂದು ಉದ್ದೇಶಿಸಲಾಗಿದ್ದರೆ ಧರ್ಮಗುರುವು 12ನೇ ಪ್ರಕರಣದಲ್ಲಿ ನಿಯಮಿಸಲಾದ ನೋಟೀಸನ್ನು ಸ್ವೀಕರಿಸಿದ ಮೇಲೆ, ಜಿಲ್ಲೆಯ ವಿವಾಹ ರಿಜಿಸ್ಟ್ರಾರರಿಗೆ ಅದನ್ನು ಕಳುಹಿಸತಕ್ಕದು, ಆ ರಿಜಿಸ್ಟ್ರಾರನು ತನ್ನ ಸ್ವಂತ ಕಚೇರಿಯ ಯಾವುದಾದರೂ ಎದ್ದು ಕಾಣುವ ಸ್ಥಳದಲ್ಲಿ ಅದನ್ನು ಅಂಟಿಸತಕ್ಕದು.

15. ಒಬ್ಬ ಪಕ್ಷಕಾರರು ಅಪ್ರಾಪ್ತ ವಯಸ್ಕನಾಗಿರುವಾಗ ವಿವಾಹ ರಿಜಿಸ್ಟ್ರಾರನಿಗೆ ನೋಟೀಸಿನ ಪ್ರತಿಯನ್ನು ಕಳುಹಿಸುವುದು :–ವಿವಾಹವಾಗಲು ಉದ್ದೇಶಿಸಿರುವ ವ್ಯಕ್ತಿಗಳಲ್ಲಿ ಒಬ್ಬರು ಅಪ್ರಾಪ್ತ ವಯಸ್ಕನಾಗಿರುವಾಗ, ಅಂಥ ನೋಟೀಸನ್ನು ಸ್ವೀಕರಿಸುವ ಪ್ರತಿಯೊಬ್ಬ ಗುರುವು, ಅದನ್ನು ಸ್ವೀಕರಿಸಿದ ಅನಂತರ ಇಪ್ಪತ್ತನಾಲ್ಕು ಗಂಟೆಗಳೊಳಗಾಗಿ, 13ನೇ ಪ್ರಕರಣದ ಉಪಬಂಧಗಳ ಮೇರೆಗೆ ಅದನ್ನು ಹಿಂದಿರುಗಿಸಿದ ಹೊರತು, ಅಂಥ ನೋಟೀಸಿನ ಪ್ರತಿಯನ್ನು ಅಂಚೆಯ ಮೂಲಕ ಅಥವಾ ಅನ್ಯಥಾ ಜಿಲ್ಲೆಯ ವಿವಾಹ ರಿಜಿಸ್ಟ್ರಾರನಿಗೆ ಅಥವಾ ಅಂಥ ಜಿಲ್ಲೆಯಲ್ಲಿ ಒಬ್ಬನಿಗಿಂತ ಹೆಚ್ಚು ರಿಜಿಸ್ಟ್ರಾರರಿದ್ದರೆ, ಹಿರಿಯ ವಿವಾಹ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದು.

16. ನೋಟೀಸನ್ನು ಸ್ವೀಕರಿಸಿದ ನಂತರದ ಪ್ರಕ್ರಿಯೆ :-ಸಂದರ್ಭಾನುಸಾರ ವಿವಾಹ ರಿಜಿಸ್ಟ್ರಾರನು ಅಥವಾ ಹಿರಿಯ ವಿವಾಹ ರಿಜಿಸ್ಟ್ರಾರನು ಅಂಥ ಯಾವುದೇ ನೋಟೀಸನ್ನು ಸ್ವೀಕರಿಸಿದ ಮೇಲೆ, ತನ್ನ ಸ್ವಂತ ಕಛೇರಿಯಳ ಯಾವುದಾದರೂ ಎದ್ದು ಕಾಣುವ ಸ್ಥಳದಲ್ಲಿ ಅದನ್ನು ಅಂಟಿಸತಕ್ಕದು ಮತ್ತು ಹಿರಿಯ ವಿವಾಹ ರಿಜಿಸ್ಟ್ರಾರನು ಅದೇ ಜಿಲ್ಲೆಯಲ್ಲಿನ ಪ್ರತಿಯೊಬ್ಬ ಇತರ ವಿವಾಹ ರಿಜಿಸ್ಟ್ರಾರರುಗಳಿಗೆ ಸದರಿ ನೋಟೀಸಿನ ಒಂದು ಪ್ರತಿಯನ್ನು ಕಳುಹಿಸುವಂತೆ ಮಾಡತಕ್ಕದು, ಆ ರಿಜಿಸ್ಟ್ರಾರುಗಳು ಮೇಲೆ, ನಿರ್ದೇಶಿಸಿರುವ ರೀತಿಯಲ್ಲಿಯೇ ಅದನ್ನು ಪ್ರಕಟಿಸತಕ್ಕದು.

17. ಕೊಡಲಾದ ನೋಟೀಸಿನ ಮತ್ತು ಮಾಡಿರುವ ಘೋಷಣೆಯ ಪ್ರಮಾಣ ಪತ್ರದ ಕೊಡುವಿಕೆ.-ಅಂಥ ಯಾವುದೇ ವಿವಾಹವನ್ನು ಮೇಲೆ ಹೇಳಿದಂತೆ ಅನುಷ್ಠಾಪಿಸಲು ಸಮ್ಮತಿಸಿರುವ ಅಥವಾ ಉದ್ದೇಶಿಸಿರುವ ಯಾವನೇ ಧರ್ಮ ಗುರುವು ನೋಟೀಸನ್ನು ಕೊಟ್ಟ ವ್ಯಕ್ತಿಯಿಂದ ಅಥವಾ ಅವನ ಪರವಾಗಿ ಹಾಗೆ ಮಾಡಲು ಅಗತ್ಯಪಡಿಸಿದಾಗ, ಮತ್ತು ವಿವಾಹವಾಗಲು ಉದ್ದೇಶಿಸಿರುವ ವ್ಯಕ್ತಿಗಳಲ್ಲೊಬ್ಬರು, ಇದರಲ್ಲಿ ಇನ್ನು ಮುಂದೆ ಅಗತ್ಯಪಡಿಸಿರುವ ಘೋಷಣೆಯನ್ನು ಮಾಡಿದ ಮೇಲೆ ಅಂಥ ನೋಟೀಸನ್ನು ಕೊಡಲಾಗಿರುವ ಮತ್ತು ಅಂಥ ಘೋಷಣೆಯನ್ನು ಮಾಡಲಾಗಿರುವ ಬಗ್ಗೆ ತನ್ನ ಸಹಿಯೊಂದಿಗೆ ಪ್ರಮಾಣ ಪತ್ರವನ್ನು ಕೊಡತಕ್ಕದು.

ಪರಂತುಕ: ಪರಂತು—

(1) ಅಂಥ ಗುರುವು ನೋಟೀಸನ್ನು ಸ್ವೀಕರಿಸಿದ ದಿನಾಂಕದ ತರುವಾಯ ನಾಲ್ಕು ದಿವಸಗಳು ಕಳೆಯುವರೆಗೆ ಅಂಥ ಯಾವ ಪ್ರಮಾಣ ಪತ್ರವನ್ನೂ ಕೊಡತಕ್ಕದಲ್ಲ.

(2) ಅಂಥ ಪ್ರಮಾಣ ಪತ್ರವನ್ನು ಏಕೆ ಕೊಡತಕ್ಕದಲ್ಲವೆಂಬುದಕ್ಕೆ ಅವನ ಸಮಾಧಾನಕ್ಕೆ ಯಾವುದೇ ಕಾನೂನು ಬದ್ಧ ಅಡ್ಡಿಯನ್ನು ತೋರಿಸಿರತಕ್ಕದಲ್ಲ, ಮತ್ತು

(3) ಅಂಥ ಪ್ರಮಾಣ ಪತ್ರದ ಕೊಡ ಮಾಡುವಿಕೆಯು ಆ ಬಗ್ಗೆ ಅಧಿಕೃತನಾದ ಯಾವನೇ ವ್ಯಕ್ತಿಯಿಂದ ಇದರಲ್ಲಿ ಇನ್ನು ಮುಂದೆ ನಮೂದಿಸಿರುವ ರೀತಿಯಲ್ಲಿ ನಿಷೇಧಿತವಾಗಿರಕೂಡದು.

18. ಪ್ರಮಾಣ ಪತ್ರವನ್ನು ಕೊಡುವುದಕ್ಕೆ ಮುಂಚೆ ಘೋಷಣೆ.—ವಿವಾಹವಾಗಲು ಉದ್ದೇಶಿಸಿರುವ ವ್ಯಕ್ತಿಗಳಲ್ಲಿ ಒಬ್ಬರು ಗುರುವಿನ ಮುಂದೆ ಖುದ್ದಾಗಿ ಹಾಜರಾಗುವವರೆಗೆ; ಮತ್ತು

(ಕ) ಸದರಿ ವಿವಾಹಕ್ಕೆ ರಕ್ತ ಸಂಬಂಧ ಅಥವಾ ವಿವಾಹ ಸಂಬಂಧದ ಯಾವುದೇ ಅಡ್ಡಿ ಅಥವಾ ಇತರ ಕಾನೂನು ಬದ್ಧವಾದ ಯಾವುದೇ ಆತಂಕವೂ ಇಲ್ಲವೆಂದು ಅವನು ಅಥವಾ ಅವಳು ನಂಬುವರೆಂದು,

ಮತ್ತು ಪಕ್ಷಕಾರರಲ್ಲಿ ಯಾರೊಬ್ಬರೂ ಅಥವಾ ಇಬ್ಬರೂ ಅಪ್ರಾಪ್ತ ವಯಸ್ಕ ಅಥವಾ ಅಪ್ರಾಪ್ತ ವಯಸ್ಕರಾಗಿರುವಾಗ,

(ಖ) ಕಾನೂನಿನ ಮೂಲಕ ಅಗತ್ಯವಿರುವ ಸಮ್ಮತಿ ಅಥವಾ ಸಮ್ಮತಿಗಳನ್ನು ಅದಕ್ಕೆ ಪಡೆದಿದೆ ಅಥವಾ ಪಡೆಯಲಾಗಿದೆ ಅಥವಾ ಸಂದರ್ಭಾನುಸಾರ ಅಂಥ ಸಮ್ಮತಿಯನ್ನು ಕೊಡಲು ಅಧಿಕಾರವನ್ನು ಹೊಂದಿರುವ ಯಾವ ವ್ಯಕ್ತಿಯೂ ಭಾರತದಲ್ಲಿ ವಾಸವಾಗಿಲ್ಲ, ಎಂದು ಶ್ರದ್ಧಾಪೂರ್ವಕ ಘೋಷಣೆಯನ್ನು ಮಾಡುವವರೆಗೆ 17ನೇ ಪ್ರಕರಣದಲ್ಲಿ ನಮೂದಿಸಿರುವ ಪ್ರಮಾಣ ಪತ್ರವನ್ನು ಕೊಡತಕ್ಕದಲ್ಲ,

19. ತಂದೆಯ ಅಥವಾ ಪಾಲಕನ ಅಥವಾ ತಾಯಿಯ ಸಮ್ಮತಿ.—ಯಾವುದೇ ಅಪ್ರಾಪ್ತ ವಯಸ್ಕನ/ಳ ತಂದೆಯು, ಜೀವಂತನಾಗಿದ್ದರೆ, ಅಥವಾ, ತಂದೆಯು ಮೃತನಾಗಿದ್ದರೆ, ಅಂಥ ಅಪ್ರಾಪ್ತ ವಯಸ್ಕನ/ಳ ಪಾಲಕನು ಮತ್ತು ಅಂಥ ಯಾವನೇ ಪಾಲಕನು ಇಲ್ಲದಿರುವ ಸಂದರ್ಭದಲ್ಲಿ ಅಂಥ ಅಪ್ರಾಪ್ತ ವಯಸ್ಕನ/ಳ ತಾಯಿಯು ಅಪ್ರಾಪ್ತ ವಯಸ್ಕನ/ಳ ವಿವಾಹಕ್ಕೆ ಸಮ್ಮತಿಯನ್ನು ಕೊಡಬಹುದು,

ಮತ್ತು ಅಂಥ ಸಮ್ಮತಿಯನ್ನು ಕೊಡಲು ಅಧಿಕೃತನಾದ ಯಾವ ವ್ಯಕ್ತಿಯೂ ಭಾರತದಲ್ಲಿ ವಾಸವಾಗಿರುವ ಹೊರತು, ಆ ವಿವಾಹಕ್ಕಾಗಿ ಅಂಥ ಸಮ್ಮತಿಯನ್ನು ಈ ಮೂಲಕ ಅಗತ್ಯಪಡಿಸಲಾಗಿದೆ.

20. ಪ್ರಮಾಣಪತ್ರದ ನೀಡಿಕೆಯನ್ನು ನೋಟಿಸ್ ಮೂಲಕ ನಿಷೇಧಿಸುವ ಅಧಿಕಾರ,—

19ನೇ ಪ್ರಕರಣದ ಮೇರೆಗೆ ವಿವಾಹಕ್ಕೆ ಯಾರ ಸಮ್ಮತಿಯು ಅಗತ್ಯವಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಗೆ, ಪ್ರಮಾಣ ಪತ್ರವನ್ನು ಕೊಡುವುದಕ್ಕೆ ಮೊದಲು ಯಾವ ಕಾಲದಲ್ಲೇ ಆಗಲಿ, ಯಾವನೇ ಗುರುವು ಅಂಥ ಪ್ರಮಾಣ ಪತ್ರ ಕೊಡುವುದನ್ನು, ಹಾಗೆ ಅಧಿಕೃತಗೊಂಡ ವ್ಯಕ್ತಿಯು ಅವನ ಅಥವಾ ಅವಳ ಹೆಸರು ಮತ್ತು ವಾಸಸ್ಥಳ ಮತ್ತು ವಿವಾಹವಾಗಲು ಉದ್ದೇಶಿಸಿರುವ ವ್ಯಕ್ತಿಗಳಲ್ಲಿ ಯಾರೊಬ್ಬರು ಹೊಂದಿರುವ ಯಾವ ಸಂಬಂಧದ ಕಾರಣದಿಂದಾಗಿ ಅವನು ಅಥವಾ ಅವಳು ಮೇಲೆ ಹೇಳಿದಂತೆ ಅಧಿಕೃತಗೊಂಡಿದ್ದಾನೋ/ಅಧಿಕೃತಗೊಂಡಿದ್ದಾಳೋ ಆ ಸಂಬಂಧವನ್ನು ನಮೂದಿಸಲಾದ ಲಿಖಿತ ನೋಟೀಸಿಗೆ ರುಜು ಮಾಡಿ ಅದನ್ನು ಅಂಥ ಗುರುವಿಗೆ ಕೊಡುವ ಮೂಲಕ ನಿಷೇಧಿಸಲು ಈ ಮೂಲಕ ಅಧಿಕಾರ ಕೊಡಲಾಗಿದೆ.

21. ನೋಟೀಸನ್ನು ಸ್ವೀಕರಿಸಿದ ಮೇಲೆ ಪ್ರಕ್ರಿಯೆ.—ಅಂಥ ಗುರುವು ಅಂಥ ಯಾವುದೇ ನೋಟೀಸನ್ನು ಸ್ವೀಕರಿಸಿದ್ದರೆ, ಅವನು ಸದರಿ ನಿಷೇಧದ ವಿಷಯವನ್ನು ಪರಿಶೀಲಿಸುವವರೆಗೆ ಮತ್ತು ವಿವಾಹವನ್ನು ನಿಷೇಧಿಸುವ ವ್ಯಕ್ತಿಯು ಹಾಗೆ ನಿಷೇಧಿಸುವುದಕ್ಕೆ ಯಾವ ಕಾನೂನುಬದ್ಧ ಅಧಿಕಾರವನ್ನೂ ಹೊಂದಿಲ್ಲವೆಂದು ಸಮಾಧಾನ ಪಟ್ಟುಕೊಳ್ಳುವವರೆಗೆ,

ಅಥವಾ ಸದರಿ ನೋಟಿಸನ್ನು ಯಾವನು ಕೊಟ್ಟಿದ್ದನೋ ಆ ವ್ಯಕ್ತಿಯು ಅದನ್ನು ಹಿಂತೆಗೆದುಕೊಳ್ಳುವವರೆಗೆ, ಅವನು ತನ್ನ ಪ್ರಮಾಣ ಪತ್ರವನ್ನು ಕೊಡತಕ್ಕದಲ್ಲ ಮತ್ತು ಸದರಿ ವಿವಾಹವನ್ನು ವಿಧಿವತ್ತಾಗಿ ನೆರವೇರಿಸತಕ್ಕದಲ್ಲ.

**22. ಅಪ್ರಾಪ್ತ ವಯಸ್ಕತೆಯ ಸಂದರ್ಭದಲ್ಲಿ ಪ್ರಮಾಣ ಪತ್ರ ಕೊಡುವುದು.**—ವಿವಾಹವಾಗಲು ಉದ್ದೇಶಿಸಿರುವ ವ್ಯಕ್ತಿಗಳಲ್ಲಿ ಯಾರಾದರೂ ಒಬ್ಬರು ಅಪ್ರಾಪ್ತ ವಯಸ್ಕರಾಗಿದ್ದಲ್ಲಿ ಮತ್ತು ಅಂಥ ವಿವಾಹಕ್ಕೆ 19ನೇ ಪ್ರಕರಣದ ಮೂಲಕ ಯಾವನ ಸಮ್ಮತಿಯು ಆಗತ್ಯವಿದೆಯೋ ಅವನ ಸಮ್ಮತಿಯನ್ನು ಪಡೆಯಲಾಗಿದೆಯೆಂದು ಗುರುವಿಗೆ ಸಮಾಧಾನವಾಗದಿದ್ದಲ್ಲಿ ಅಂಥ ಗುರುವು ವಿವಾಹದ ನೋಟೀಸನ್ನು ಸ್ವೀಕರಿಸಿದ ತರುವಾಯ ಹದಿನಾಲ್ಕು ದಿವಸಗಳು ಮುಕ್ತಾಯವಾಗುವವರೆಗೆ ಅಂಥ ಪ್ರಮಾಣ ಪತ್ರವನ್ನು ಕೊಡತಕ್ಕದಲ್ಲ.

**23. ಭಾರತೀಯ ಕ್ರೈಸ್ತರಿಗೆ ಪ್ರಮಾಣ ಪತ್ರಗಳನ್ನು ಕೊಡುವುದು.**—ವಿವಾಹವಾಗಲಿರುವ ಯಾವನೇ ಭಾರತೀಯ ಕ್ರೈಸ್ತನು ಧರ್ಮಗುರುವಿಗೆ ವಿವಾಹದ ನೋಟೀಸನ್ನು ಕೊಟ್ಟಾಗ ಅಥವಾ 17ನೇ ಪ್ರಕರಣದ ಮೇರೆಗೆ ಅಂಥ ಗುರುವಿನಿಂದ ಪ್ರಮಾಣ ಪತ್ರವನ್ನು ಪಡೆದುಕೊಳ್ಳಲು ಅರ್ಜಿ ಸಲ್ಲಿಸುವಾಗ, ಅಂಥ ಗುರುವು ಪ್ರಮಾಣ ಪತ್ರವನ್ನು ಕೊಡುವುದಕ್ಕೆ ಮುಂಚೆ, ಅಂಥ ಭಾರತೀಯ ಕ್ರೈಸ್ತನು, ಸಂದರ್ಭಾನುಸಾರ ಸದರಿ ನೋಟೀಸಿನ ಅಥವಾ ಪ್ರಮಾಣ ಪತ್ರದ ತಾತ್ಪರ್ಯ ಅಥವಾ ಪರಿಣಾಮವನ್ನು ತಿಳಿದಿದ್ದಾನೆಯೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದು ಮತ್ತು ಆಗಿಲ್ಲದಿದ್ದರೆ ಅಂಥ ಭಾರತೀಯ ಕ್ರೈಸ್ತನಿಗೆ, ಅವನಿಗೆ ಅರ್ಥವಾಗುವಂಥ ಭಾಷೆಯಲ್ಲಿ ನೋಟಿಸನ್ನು ಅಥವಾ ಪ್ರಮಾಣ ಪತ್ರವನ್ನು ಭಾಷಾಂತರಿಸತಕ್ಕದು ಅಥವಾ ಭಾಷಾಂತರಿಸುವಂತೆ ಮಾಡತಕ್ಕದು.

**24. ಪ್ರಮಾಣ ಪತ್ರದ ನಮೂನೆ.**—ಅಂಥ ಗುರುವು ಕೊಡಬೇಕಾದ ಪ್ರಮಾಣ ಪತ್ರವು ಇದರೊಡನೆ ಅನುಬಂಧಿಸಿರುವ ಎರಡನೇ ಅನುಸೂಚಿಯಲ್ಲಿ ಒಳಗೊಂಡಿರುವ ನಮೂನೆಯಲ್ಲಿ ಅಥವಾ ಆ ಪರಿಣಾಮವುಳ್ಳಂತೆ ಇರತಕ್ಕದು,

**25. ವಿವಾಹವನ್ನು ಅನುಷ್ಠಾಪಿಸುವುದು.**—ಗುರುವು ಪ್ರಮಾಣ ಪತ್ರವನ್ನು ಕೊಟ್ಟ ತರುವಾಯ ಗುರುವು ಅಂಗೀಕರಿಸಲು ಸೂಕ್ತವೆಂದು ಭಾವಿಸುವಂಥ ರೀತಿ ಅಥವಾ ಕರ್ಮಾಚರಣೆಗೆ ಅನುಸಾರವಾಗಿ ಪ್ರಮಾಣ ಪತ್ರದಲ್ಲಿ ವಿವರಿಸಿರುವ ವ್ಯಕ್ತಿಗಳ ನಡುವೆ ವಿವಾಹವನ್ನು ಅನುಷ್ಠಾಪಿಸಬಹುದು.

ಪರಂತು, ವಿವಾಹವನ್ನು ಗುರುವಲ್ಲದೆ ಕನಿಷ್ಠ ಪಕ್ಷ ಇಬ್ಬರು ಸಾಕ್ಷಿದಾರರ ಸಮಕ್ಷಮದಲ್ಲಿ ಅನುಷ್ಠಾಪಿಸತಕ್ಕದು,

**26. ಎರಡು ತಿಂಗಳೊಳಗಾಗಿ ವಿವಾಹವು ಅನುಷ್ಠಾಪಿತವಾಗದಿದ್ದರೆ, ಪ್ರಮಾಣ ಪತ್ರವು ಶೂನ್ಯವಾಗುವುದು.**—ಮೇಲೆ ಹೇಳಿದಂತೆ ಅಂಥ ಗುರುವು ಪ್ರಮಾಣ ಪತ್ರವನ್ನು ಕೊಟ್ಟ ದಿನಾಂಕದಿಂದ ಎರಡು ತಿಂಗಳೊಳಗೆ ವಿವಾಹವನ್ನು ಅನುಷ್ಠಾಪಿಸಿರದಿದ್ದರೆ, ಅಂಥ ಪ್ರಮಾಣ ಪತ್ರ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ವ್ಯವಹರಣೆಗಳು (ಯಾವುದಾದರೂ ಇದ್ದರೆ) ಶೂನ್ಯವಾಗತಕ್ಕದು.

ಮತ್ತು ಹೊಸ ನೋಟೀಸನ್ನು ಕೊಡುವವರೆಗೆ ಮತ್ತು ಮೇಲೆ ಹೇಳಿದ ರೀತಿಯಲ್ಲಿ ಅದರ ಬಗ್ಗೆ ಪ್ರಮಾಣ ಪತ್ರವನ್ನು ಕೊಡುವವರೆಗೆ ಯಾವ ವ್ಯಕ್ತಿಯೂ ಸದರಿ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಲು ಮುಂದುವರಿಯತಕ್ಕದಲ್ಲ.

## ಭಾಗ—IV

### ಕ್ರೈಸ್ತ ಧರ್ಮಗುರುಗಳಿಂದ ವಿಧಿವತ್ತಾಗಿ ಅನುಷ್ಠಾಪಿಸಲಾದ ವಿವಾಹಗಳ ನೋಂದಣಿ

**27. ವಿವಾಹಗಳನ್ನು ಯಾವಾಗ ನೋಂದಾಯಿಸಬೇಕು.**—ಈ ಅಧಿನಿಯಮದ ಭಾಗ V ಅಥವಾ ಭಾಗ VIರ ಮೇರೆಗೆ ಅನುಷ್ಠಾಪಿಸಿರುವ ವಿವಾಹಗಳನ್ನು ಹೊರತುಪಡಿಸಿ ಒಬ್ಬರು ಅಥವಾ ಇಬ್ಬರೂ ಕ್ರೈಸ್ತ ಮತವನ್ನು ಅಂಗೀಕರಿಸಿರುವ ವ್ಯಕ್ತಿಗಳ ನಡುವೆ ಭಾರತದಲ್ಲಿ ಇನ್ನು ಮುಂದೆ ಅನುಷ್ಠಾಪಿಸಲಾಗುವ ಎಲ್ಲ ವಿವಾಹಗಳನ್ನು ಇದರಲ್ಲಿ ಇನ್ನು ಮುಂದೆ ನಿಯಮಿಸಿರುವ ರೀತಿಯಲ್ಲಿ ನೋಂದಾಯಿಸತಕ್ಕದು.

**28. ಇಂಗ್ಲೆಂಡಿನ ಚರ್ಚಿನ ಪಾದ್ರಿಗಳ ಮೂಲಕ ವಿಧಿವತ್ತಾಗಿ ನೆರವೇರಿಸಲಾದ ವಿವಾಹಗಳ ನೋಂದಣಿ.**—ಇಂಗ್ಲೆಂಡಿನ ಚರ್ಚಿನ ಪ್ರತಿಯೊಬ್ಬ ಪಾದ್ರಿಯೂ ವಿವಾಹಗಳ ನೋಂದಣಿ ಪುಸ್ತಕವನ್ನು ಇಡತಕ್ಕದು ಮತ್ತು ಈ ಅಧಿನಿಯಮದ ಮೇರೆಗೆ ಅವನು ಅನುಷ್ಠಾಪಿಸುವ ಪ್ರತಿಯೊಂದು ವಿವಾಹವನ್ನು, ಇದರೊಡನೆ ಅನುಬಂಧಿಸಿರುವ ಮೂರನೇ ಅನುಸೂಚಿಯಲ್ಲಿ ನಿರೂಪಿಸಿರುವ ಕೋಷ್ಟಕ ರೂಪಕ್ಕನುಸಾರವಾಗಿ, ಅದರಲ್ಲಿ ನೋಂದಾಯಿಸತಕ್ಕದು.

**29. ಆರ್ಚ್‌ಡೀಕೊನರಿಗೆ ತ್ರೈಮಾಸಿಕ ವಿವರ ಪಟ್ಟಿಕೆಗಳು.**—ಇಂಗ್ಲೆಂಡಿನ ಚರ್ಚಿನ ಪ್ರತಿಯೊಬ್ಬ ಪಾದ್ರಿಯು ತಾನು ಹೊಂದಿರುವ ಯಾವುದೇ ಅಧ್ಯಾತ್ಮಿಕ ಪ್ರಭಾರವನ್ನು ಹೊಂದಿರುವ ಯಾವುದೇ ಸ್ಥಳದಲ್ಲಿ ಅನುಷ್ಠಾಪಿಸಲಾದ ವಿವಾಹಗಳ ರಿಜಿಸ್ಟರಿನಲ್ಲಿರುವ ನಮೂದನೆಗಳನ್ನು ತನ್ನ ಸಹಿಯ ಮೂಲಕ ಅಧಿಪ್ರಮಾಣಿತಗೊಳಿಸಿ ಪ್ರತಿ ವರ್ಷ ತಾನು ಅಧೀನನಾಗಿರುವ ಅಥವಾ ಯಾವುದರ ಪರಿಮಿತಿಗಳೊಂದಿಗೆ ಆ ಸ್ಥಳವು ಇದೆಯೋ ಅದರ ಆರ್ಚ್‌ಡಿಕೊನರಿಯ ರಿಜಿಸ್ಟ್ರಾರನಿಗೆ ನಾಲ್ಕು ಬಾರಿ ದ್ವಿಪ್ರತಿಗಳಲ್ಲಿ ಕಳುಹಿಸತಕ್ಕದು.

**ವಿವರ ಪಟ್ಟಿಕೆಗಳ ಒಳಾಂಶಗಳು.**—ಅಂಥ ತ್ರೈಮಾಸಿಕ ವಿವರ ಪಟ್ಟಿಕೆಗಳು ಅನುಕ್ರಮವಾಗಿ ಪ್ರತಿ ವರ್ಷ ಜನವರಿ ಮೊದಲನೇ ದಿನದಿಂದ ಮಾರ್ಚಿ ಮೂವತ್ತೊಂದನೇ ದಿನದವರೆಗೆ ಏಪ್ರಿಲ್ ಮೊದಲನೇ ದಿನದಿಂದ ಜೂನ್ ಮೂವತ್ತನೇ, ದಿನದವರೆಗೆ, ಜುಲೈ ಮೊದಲನೇ ದಿನದಿಂದ ಸೆಪ್ಟೆಂಬರ್ ಮೂವತ್ತನೇ ದಿನದವರೆಗೆ ಮತ್ತು ಅಕ್ಟೋಬರ್ ಮೊದಲನೇ ದಿನದಿಂದ ಡಿಸೆಂಬರ್ ಮೂವತ್ತೊಂದನೇ ದಿನದವರೆಗೆ ಸದರಿ ರಿಜಿಸ್ಟರಿನಲ್ಲಿ ಅಡಕವಾಗಿರುವ ವಿವಾಹಗಳ ಎಲ್ಲ ನಮೂದನೆಗಳನ್ನು ಒಳಗೊಂಡಿರತಕ್ಕದು ಮತ್ತು ಅವುಗಳನ್ನು ಮೇಲೆ ನಿರ್ದಿಷ್ಟಪಡಿಸಿರುವ ಪ್ರತಿಯೊಂದು ತ್ರೈಮಾಸಿಕವು ಮುಕ್ತಾಯವಾದ ದಿನದಿಂದ ಎರಡು ವಾರಗಳೊಳಗಾಗಿ ಅಂಥ ಪಾದ್ರಿಯು ಕಳುಹಿಸತಕ್ಕದು.

ಸದರಿ ರಿಜಿಸ್ಟ್ರಾರನು ಸದರಿ ವಿವರ ಪಟ್ಟಿಕೆಗಳನ್ನು ಸ್ವೀಕರಿಸಿದ ಮೇಲೆ, ಜನನ, ಮರಣ ಮತ್ತು ವಿವಾಹಗಳ ರಿಜಿಸ್ಟ್ರಾರ್ ಜನರಲ್‌ನಿಗೆ ಅದರ ಒಂದು ಪ್ರತಿಯನ್ನು ಕಳುಹಿಸತಕ್ಕುದು.

30. ರೋಮಿನ ಚರ್ಚಿನ ಪಾದ್ರಿಯು ಅನುಷ್ಠಾಪಿಸಿರುವ ವಿವಾಹಗಳ ನೋಂದಣಿ ಮತ್ತು ವಿವರ ಪಟ್ಟಿಕೆಗಳು.—ರೋಮಿನ ಚರ್ಚಿನ ಪಾದ್ರಿಯು ನೆರವೇರಿಸುವ ಪ್ರತಿಯೊಂದು ವಿವಾಹವು ಅಂಥ ವಿವಾಹವನ್ನು ಅನುಷ್ಠಾಪಿಸಿರುವ ಬಿಷಪ್ಪಿನ ಆಡಳಿತ ಪ್ರಾಂತದ ಅಥವಾ ವಿಕರಿಯೇಟಿನ ರೋಮಿನ ಕ್ಯಾಥೊಲಿಕ ಬಿಷಪ್ಪಿನ ಮೂಲಕ ಆ ಬಗ್ಗೆ ನಿರ್ದೇಶಿತನಾದ ವ್ಯಕ್ತಿಯು ಮತ್ತು ಆ ರೀತಿಗನುಸಾರವಾಗಿ ನೋಂದಾಯಿಸಲಾಗತಕ್ಕುದು.

ಮತ್ತು ಅಂಥ ವ್ಯಕ್ತಿಯು ನಿಕಟಪೂರ್ವದ ಮೂರು ತಿಂಗಳ ಅವಧಿಯಲ್ಲಿ ತಾನು ನೋಂದಾಯಿಸಿದ ಎಲ್ಲ ವಿವಾಹಗಳ ನಮೂದನೆಗಳ ವಿವರಪಟ್ಟಿಕೆಗಳನ್ನು ಜನನ, ಮರಣ ಮತ್ತು ವಿವಾಹಗಳ ರಿಜಿಸ್ಟ್ರಾರ ಜನರಲ್ಲನಿಗೆ ತ್ರೈಮಾಸಿಕವಾಗಿ ಕಳುಹಿಸತಕ್ಕುದು.

31. ಸ್ಕಾಟಲೆಂಡ್ ಚರ್ಚಿನ ಪಾದ್ರಿಯು ವಿಧಿವತ್ತಾಗಿ ನೆರವೇರಿಸುವ ವಿವಾಹಗಳ ನೋಂದಣಿ ಮತ್ತು ವಿವರ ಪಟ್ಟಿಕೆಗಳು.—ಸ್ಕಾಟ್‌ಲೆಂಡ್ ಚರ್ಚಿನ ಪ್ರತಿಯೊಬ್ಬ ಪಾದ್ರಿಯು ವಿವಾಹಗಳ ರಿಜಿಸ್ಟರನ್ನು ಇಡತಕ್ಕುದು.

ಮತ್ತು ಈ ಅಧಿನಿಯಮದ ಮೇರೆಗೆ ತಾನು ಅನುಷ್ಠಾಪಿಸುವ ಪ್ರತಿಯೊಂದು ವಿವಾಹವನ್ನು ಇದಕ್ಕೆ ಅನುಬಂಧಿಸಿರುವ ಮೂರನೇ ಅನುಸೂಚಿಯಲ್ಲಿ ನಿರೂಪಿಸಿರುವ ಕೋಷ್ಠಕ ರೂಪಕ್ಕನುಸಾರವಾಗಿ ಅದರಲ್ಲಿ ನೋಂದಾಯಿಸತಕ್ಕುದು.

ಮತ್ತು ಅಂಥ ಎಲ್ಲ ವಿವಾಹಗಳ ಬಗ್ಗೆ 29ನೇ ಪ್ರಕರಣದಲ್ಲಿ ನಿಯಮಿಸಿರುವಂಥವುಗಳೇ ಆದ ವಿವರ ಪಟ್ಟಿಕೆಗಳನ್ನು ಸ್ಕಾಟಲೆಂಡ್ ಚರ್ಚಿನ ಹಿರಿಯ ಚ್ಯಾಪ್ಲಿನ ಮೂಲಕ ಜನನ, ಮರಣ ಮತ್ತು ವಿವಾಹಗಳ ರಿಜಿಸ್ಟ್ರಾರ್ ಜನರಲ್ಲನಿಗೆ ತ್ರೈಮಾಸಿಕವಾಗಿ ಕಳುಹಿಸತಕ್ಕುದು.

32. ಕೆಲವು ವಿವಾಹಗಳನ್ನು ದ್ವಿಪ್ರತಿಯಲ್ಲಿ ನೋಂದಾಯಿಸತಕ್ಕುದು.—ಬಿಷಪ್ಪಿನಿಂದ ದೀಕ್ಷೆಯನ್ನು ಪಡೆದಿರುವ ಆದರೆ ಇಂಗ್ಲೆಂಡಿನ ಚರ್ಚಿನ ಅಥವಾ ರೋಮಿನ ಚರ್ಚಿನ ಪಾದ್ರಿಯಲ್ಲದ ಯಾವನೋ ವ್ಯಕ್ತಿಯಿಂದ ಅಥವಾ ವಿವಾಹಗಳನ್ನು ಅನುಷ್ಠಾಪಿಸಲು ಈ ಅಧಿನಿಯಮದ ಮೇರೆಗೆ ಲೈಸೆನ್ಸು ಪಡೆದ ಯಾವನೇ ಕ್ರೈಸ್ತ ಧರ್ಮ ಗುರುವಿನಿಂದ ಅನುಷ್ಠಾಪಿಸಲಾದ ಪ್ರತಿಯೊಂದು ವಿವಾಹವು ಅವನು ಅನುಷ್ಠಾಪಿಸಿದ ತರುವಾಯ ಕೂಡಲೇ ಅದನ್ನು ಅನುಷ್ಠಾಪಿಸಿರುವ ವ್ಯಕ್ತಿಯು ದ್ವಿಪ್ರತಿಯಲ್ಲಿ ನೋಂದಾಯಿಸತಕ್ಕುದು, (ಅಂದರೆ) ಆ ಉದ್ದೇಶಕ್ಕಾಗಿ ಅವನು ಇಟ್ಟಿರಬೇಕಾದ ವಿವಾಹ ರಿಜಿಸ್ಟರು ಪುಸ್ತಕದಲ್ಲಿ, ಇದಕ್ಕೆ ಅನುಬಂಧಿಸಿರುವ ನಾಲ್ಕನೇ ಅನುಸೂಚಿಯಲ್ಲಿ ಅಡಕವಾಗಿರುವ ನಮೂನೆಗನುಸಾರವಾಗಿ ಮತ್ತು ಪಕ್ಕ ಪ್ರತಿಯಂತೆ ವಿವಾಹ ರಿಜಿಸ್ಟರ್ ಪುಸ್ತಕಕ್ಕೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿಯೂ ಸಹ ಹಾಗೆ ನೋಂದಾಯಿಸತಕ್ಕುದು.

33. ಅಂಥ ವಿವಾಹಗಳ ನಮೂದನೆಗಳಿಗೆ ಸಹಿ ಮಾಡತಕ್ಕುದು ಮತ್ತು ಅವುಗಳನ್ನು ಅನುಪ್ರಮಾಣಿಸತಕ್ಕುದು:—ವಿವಾಹವನ್ನು ವಿಧಿವತ್ತಾಗಿ ನೆರವೇರಿಸುವ ವ್ಯಕ್ತಿಯು ಮತ್ತು ವಿವಾಹವಾಗಿರುವ ವ್ಯಕ್ತಿಗಳು ಸಹ ಪ್ರಮಾಣ ಪತ್ರ ಮತ್ತು ವಿವಾಹ ರಿಜಿಸ್ಟರು ಪುಸ್ತಕ ಎರಡರಲ್ಲೂ ಅಂಥ ವಿವಾಹದ ನಮೂದನೆಗೆ ಸಹಿ ಮಾಡತಕ್ಕುದು ಮತ್ತು ವಿವಾಹವನ್ನು ಅನುಷ್ಠಾಪಿಸುವ ವ್ಯಕ್ತಿಯನ್ನು ಹೊರತುಪಡಿಸಿ, ವಿವಾಹವನ್ನು ವಿಧಿವತ್ತಾಗಿ ನೆರವೇರಿಸುವಾಗ ಹಾಜರಿರುವ ಇಬ್ಬರು ನಂಬಲರ್ಹ ಸಾಕ್ಷಿದಾರರು ಅದನ್ನು ಅನುಪ್ರಮಾಣೀಕರಿಸತಕ್ಕುದು.

ಅಂಥ ಪ್ರತಿಯೊಂದು ನಮೂದನೆಯನ್ನು ಪುಸ್ತಕದ ಮೊದಲಿನಿಂದ ಕೊನೆಯವರೆಗೆ ಕ್ರಮವಾಗಿ ಮಾಡತಕ್ಕುದು ಮತ್ತು ಪ್ರಮಾಣ ಪತ್ರದ ಸಂಖ್ಯೆಯು ರಿಜಿಸ್ಟರು ಪುಸ್ತಕದ ನಮೂದನೆಯೊಡನೆ ಸಂವಾದಿಯಾಗಿರತಕ್ಕುದು.

34. ಪ್ರಮಾಣ ಪತ್ರವನ್ನು ವಿವಾಹದ ರಿಜಿಸ್ಟ್ರಾರನಿಗೆ ಕಳುಹಿಸತಕ್ಕುದು, ಪ್ರತಿ ಮಾಡತಕ್ಕುದು ಮತ್ತು ರಿಜಿಸ್ಟ್ರಾರ್ ಜನರಲ್ಲನಿಗೆ ಕಳುಹಿಸತಕ್ಕುದು :—ವಿವಾಹವನ್ನು ಅನುಷ್ಠಾಪಿಸುವ ವ್ಯಕ್ತಿಯು ವಿವಾಹ ರಿಜಿಸ್ಟರು ಪುಸ್ತಕದಿಂದ ಪ್ರಮಾಣ ಪತ್ರವನ್ನು ತತ್‌ಕ್ಷಣ ಪ್ರತ್ಯೇಕಗೊಳಿಸತಕ್ಕುದು ಮತ್ತು ವಿವಾಹವು ಅನುಷ್ಠಾಪಿತವಾದ ಕಾಲದಿಂದ ಒಂದು ತಿಂಗಳೊಳಗಾಗಿ ವಿವಾಹವು ಯಾವ ಜಿಲ್ಲೆಯಲ್ಲಿ ಅನುಷ್ಠಾಪಿತವಾಯಿತೋ ಆ ಜಿಲ್ಲೆಯ ವಿವಾಹ ರಿಜಿಸ್ಟ್ರಾರನಿಗೆ, ಅಥವಾ ಒಬ್ಬನಿಗಿಂತ ಹೆಚ್ಚು ವಿವಾಹ ರಿಜಿಸ್ಟ್ರಾರರುಗಳಿದ್ದಲ್ಲಿ ಹಿರಿಯ ವಿವಾಹ ರಿಜಿಸ್ಟ್ರಾರನಿಗೆ ಅದನ್ನು ಕಳುಹಿಸತಕ್ಕುದು.

ಅವನು ಆ ಉದ್ದೇಶಕ್ಕಾಗಿ ತಾನು ಇಡಬೇಕಾದ ಪುಸ್ತಕದಲ್ಲಿ ಅಂಥ ಪ್ರಮಾಣ ಪತ್ರದ ಪ್ರತಿಯನ್ನು ಮಾಡಿಸತಕ್ಕುದು.

ಮತ್ತು ಅವನು ತಿಂಗಳಿನಲ್ಲಿ ತಾನು ಸ್ವೀಕರಿಸುವ ಎಲ್ಲ ಪ್ರಮಾಣ ಪತ್ರಗಳನ್ನು ಇದರಲ್ಲಿ ಇನ್ನು ಮುಂದೆ ಅಗತ್ಯಪಡಿಸಿರುವಂತೆ ಸೇರಿಸಲಾಗಿರುವ ಸಂಖ್ಯೆ ಮತ್ತು ಸಹಿ ಅಥವಾ ಚಿಕ್ಕ ರುಜುವಿನೊಂದಿಗೆ ಜನನ, ಮರಣ ಮತ್ತು ವಿವಾಹಗಳ ರಿಜಿಸ್ಟ್ರಾರ್ ಜನರಲ್ಲನಿಗೆ ಕಳುಹಿಸ ತಕ್ಕುದು.

35 ಪ್ರಮಾಣ ಪತ್ರಗಳ ಪ್ರತಿಗಳನ್ನು ನಮೂದಿಸತಕ್ಕುದು ಮತ್ತು ಅವುಗಳಿಗೆ ಸಂಖ್ಯೆ ಕೊಡತಕ್ಕದು.—ಅಂಥ ಪ್ರತಿಗಳನ್ನು ಸದರಿ ಪುಸ್ತಕದಲ್ಲಿ ಮೊದಲಿನಿಂದ ಕೊನೆಯವರೆಗೆ ಕ್ರಮವಾಗಿ ನಮೂದಿಸತಕ್ಕದು ಮತ್ತು ಅವುಗಳು ಪ್ರತಿ ಮಾಡಿದಂತೆ ಪ್ರಮಾಣ ಪತ್ರದ ಸಂಖ್ಯೆ ಮತ್ತು ಅವನು ಸ್ವೀಕರಿಸುವ ಪ್ರತಿಯೊಂದು ಪ್ರಮಾಣ ಪತ್ರದ ಕ್ರಮಕ್ಕನುಸಾರವಾಗಿ ಸದರಿ ಪುಸ್ತಕದಲ್ಲಿ ಸದರಿ ಪ್ರತಿಯ ನಮೂದನೆಯ ಸಂಖ್ಯೆಯನ್ನು ಸೂಚಿಸುವ ವಿವಾಹ ರಿಜಿಸ್ಟ್ರಾರನು ನಮೂದಿಸಬೇಕಾದ ಸಂಖ್ಯೆ, ಇವೆರಡನ್ನೂ ಹೊಂದಿರತಕ್ಕುದು.

36 ರಿಜಿಸ್ಟ್ರಾರನು ಪ್ರಮಾಣ ಪತ್ರಕ್ಕೆ ನಮೂದನೆಯ ಸಂಖ್ಯೆಯನ್ನು ಸೇರಿಸತಕ್ಕುದು ಮತ್ತು ರಿಜಿಸ್ಟ್ರಾರ ಜನರಲ್ಲನಿಗೆ ಕಳುಹಿಸತಕ್ಕುದು.—ವಿವಾಹ ರಿಜಿಸ್ಟ್ರಾರನು ಪುಸ್ತಕದಲ್ಲಿರುವ ಪ್ರತಿಯ ನಮೂದನೆಯ ಕೊನೆಯಲ್ಲಿ ಹೇಳಿದ ಅಂಥ ಸಂಖ್ಯೆಯನ್ನು ಸಹಿ ತನ್ನ ಸಹಿ ಅಥವಾ ಚಿಕ್ಕ ಸಹಿನೊಂದಿಗೆ ಪ್ರಮಾಣ ಪತ್ರಕ್ಕೆ ಸೇರಿಸತಕ್ಕುದು ಮತ್ತು ಪ್ರತಿ ತಿಂಗಳಿನ ಕೊನೆಯಲ್ಲಿ ಜನನ, ಮರಣ ಮತ್ತು ವಿವಾಹಗಳ ರಿಜಿಸ್ಟ್ರಾರ್ ಜನರಲ್ಲನಿಗೆ ಅದನ್ನು ಕಳುಹಿಸತಕ್ಕುದು.

37 5ನೇ ಪ್ರಕರಣದ (1)ನೇ (2)ನೇ ಮತ್ತು (3)ನೇ ಖಂಡಗಳಲ್ಲಿ ಉಲ್ಲೇಖಿಸಿರುವ ವ್ಯಕ್ತಿಗಳ ಮೂಲಕ ಭಾರತೀಯ ಕ್ರೈಸ್ತರ ನಡುವಣ ವಿವಾಹಗಳ ನೋಂದಣಿ.—5ನೇ ಪ್ರಕರಣದ (1)ನೇ ಖಂಡ (2)ನೇ ಖಂಡ. ಅಥವಾ (3)ನೇ ಖಂಡದಲ್ಲಿ ಉಲ್ಲೇಖಿಸಿರುವಂಥ ಯಾವನೇ ವ್ಯಕ್ತಿಯಿಂದ, ಪಾದ್ರಿಯಿಂದ ಅಥವಾ ಧರ್ಮ ಗುರುವಿನಿಂದ ಭಾರತೀಯ ಕ್ರೈಸ್ತರ ನಡುವಣ ಯಾವುದೇ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಲಾದಾಗ ಅದನ್ನು ಅನುಷ್ಠಾಪಿಸುವ ವ್ಯಕ್ತಿಯು 28ರಿಂದ 36ರ ವರೆಗಿನ ಪ್ರಕರಣಗಳ ಮೂಲಕ ಎರಡೂ ಸೇರಿ, ಉಪಬಂಧಿಸಿದ ರೀತಿಯಲ್ಲಿ ಮುಂದುವರಿಯುವ ಬದಲು ವಿವಾಹವನ್ನು ಪ್ರತ್ಯೇಕ ರಿಜಿಸ್ಟರು ಪುಸ್ತಕದಲ್ಲಿ ನೋಂದಾಯಿಸತಕ್ಕುದು ಮತ್ತು ಅದು ಭರ್ತಿಯಾಗುವವರೆಗೆ ಅದನ್ನು ಸುರಕ್ಷಿತವಾಗಿಟ್ಟಿರತಕ್ಕುದು ಅಥವಾ ಸದರಿ ಪುಸ್ತಕವು ಭರ್ತಿಯಾಗುವುದಕ್ಕೆ ಮುಂಚೆ ಯಾವ ಜಿಲ್ಲೆಯಲ್ಲಿ ಅವನು ವಿವಾಹವನ್ನು ಅನುಷ್ಠಾಪಿಸಿದ್ದನೋ ಆ ಜಿಲ್ಲೆಯನ್ನು ಬಿಟ್ಟು ಹೋಗುವಲ್ಲಿ ಸದರಿ ಜಿಲ್ಲೆಯಲ್ಲಿ ಅವನ ಕರ್ತವ್ಯಗಳಿಗೆ ಉತ್ತರವರ್ತಿಯಾಗುವ ವ್ಯಕ್ತಿಗೆ ಅದನ್ನು ವಹಿಸಿ ಕೊಡತಕ್ಕುದು.

ರಿಜಿಸ್ಟಾರು ಪುಸ್ತಕದ ಅಭಿರಕ್ಷೆ ಮತ್ತು ವಿಲೆ.—ಪುಸ್ತಕವು ಭರ್ತಿಯಾಗಿರುವ ಕಾಲದಲ್ಲಿ ಅದರ ನಿಯಂತ್ರಣವನ್ನು ಹೊಂದಿರುವ ಯಾವನೇ ಆಗಲಿ ಜಿಲ್ಲೆಯ ವಿವಾಹ ರಿಜಿಸ್ಟ್ರಾರನಿಗೆ ಅಥವಾ ಒಬ್ಬನಿಗಿಂತ ಹೆಚ್ಚು ವಿವಾಹ ರಿಜಿಸ್ಟ್ರಾರುಗಳಿದ್ದರೆ, ಹಿರಿಯ ವಿವಾಹ ರಿಜಿಸ್ಟ್ರಾರನಿಗೆ ಅದನ್ನು ಕಳುಹಿಸತಕ್ಕುದು, ಅವನು ಕಚೇರಿಯ ದಾಖಲೆಗಳೊಂದಿಗೆ ಇಟ್ಟುಕೊಂಡಿರುವುದಕ್ಕಾಗಿ ಜನನ, ಮರಣ ಮತ್ತು ವಿವಾಹಗಳ ರಿಜಿಸ್ಟ್ರಾರನಿಗೆ ಕಳುಹಿಸತಕ್ಕುದು,

## ಭಾಗ-V

ವಿವಾಹ ರಿಜಿಸ್ಟ್ರಾರನಿಂದ ಅಥವಾ ಅವನ ಸಮ್ಮುಖದಲ್ಲಿ ವಿವಾಹಗಳನ್ನು ಅನುಷ್ಠಾಪಿಸುವುದು.

38 ವಿವಾಹ ರಿಜಿಸ್ಟ್ರಾರನ ಮುಂದೆ ನೇರವೇರಿಸಲು ಉದ್ದೇಶಿಸಲಾದ ವಿವಾಹದ ನೋಟೀಸು.——ವಿವಾಹ ರಿಜಿಸ್ಟ್ರಾರನಿಂದ ಅಥವಾ ಅವನ ಸಮ್ಮುಖದಲ್ಲಿ ವಿಧಿವತ್ತಾಗಿ ವಿವಾಹವನ್ನು ನೆರವೇರಿಸಬೇಕೆಂದು ಉದ್ದೇಶಿಸಿದಾಗ, ಅಂಥ ವಿವಾಹದ ಪಕ್ಷಕಾರರಲ್ಲಿ ಒಬ್ಬನು ಇದರೊಡನೆ ಅನುಬಂಧಿಸಿರುವ ಮೊದಲನೇ ಅನುಸೂಚಿಯಲ್ಲಿ ಅಡಕವಾಗಿರುವ ಅಥವಾ ಅದೇ ಪರಿಣಾಮವುಳ್ಳಂಥ ನಮೂನೆಯಲ್ಲಿ ಯಾವ ಜಿಲ್ಲೆಯೊಳಗೆ ಪಕ್ಷಕಾರರು ವಾಸಿಸುತ್ತಿದ್ದರೋ ಆ ಜಿಲ್ಲೆಯೊಳಗಿನ ಯಾವನೇ ವಿವಾಹ ರಿಜಿಸ್ಟ್ರಾರನಿಗೆ ಬರಹದಲ್ಲಿ ನೋಟೀಸನ್ನು ಕೊಡತಕ್ಕುದು.

ಅಥವಾ ಪಕ್ಷಕಾರರು ಬೇರೆ ಬೇರೆ ಜಿಲ್ಲೆಗಳಲ್ಲಿ ವಾಸಿಸುತ್ತಿದ್ದರೆ, ಪತ್ರಿಯೊಂದು ಜಿಲ್ಲೆಯ ವಿವಾಹ ರಿಜಿಸ್ಟ್ರಾರನಿಗೆ ಅಂಥದೇ ನೋಟೀಸನ್ನು ಕೊಡತಕ್ಕುದು,

ಮತ್ತು ವಿವಾಹವಾಗಲು ಉದ್ದೇಶಿಸಿರುವ ಪ್ರತಿ ಒಬ್ಬ ಪಕ್ಷಕಾರನ ಹೆಸರು, ಅಡ್ಡ ಹೆಸರು, ಮತ್ತು ವೃತ್ತಿ ಅಥವಾ ಸ್ಥಿತಿ ಪ್ರತಿಯೊಬ್ಬರ ವಾಸಸ್ಥಳ, ಅದರಲ್ಲಿ ಪ್ರತಿಯೊಬ್ಬರು ವಾಸಿಸುತ್ತಿದ್ದ ಕಾಲಾವಧಿ ಮತ್ತು ಯಾವ ಸ್ಥಳದಲ್ಲಿ ವಿವಾಹವನ್ನು ವಿಧಿವತ್ತಾಗಿ ನೇರವೇರಿಸಬೇಕೆಂಬುದನ್ನು ನಿರೂಪಿಸತಕ್ಕುದು:

ಪರಂತು, ಪಕ್ಷಕಾರರಲ್ಲಿ ಯಾರಾದರೊಬ್ಬರು ನೋಟೀಸಿನಲ್ಲಿ ನಮೂದಿಸಿರುವ ಸ್ಥಳವಲ್ಲಿ ಒಂದು ತಿಂಗಳಿಗಿಂತ ಹೆಚ್ಚಾಗಿ ವಾಸಿಸಿದ್ದರೆ, ಒಂದು ತಿಂಗಳು ಮತ್ತು ಮೇಲ್ಪಟ್ಟು ಅವನು ಅಥವಾ ಅವಳು ಅಲ್ಲಿ ವಾಸವಾಗಿದ್ದರು ಎಂಬುದನ್ನು ಅದರಲ್ಲಿ ನಿರೂಪಿಸಬಹುದು.

39 ನೋಟೀಸಿನ ಪ್ರಕಟಣೆ.—ಪ್ರತಿಯೊಬ್ಬ ವಿವಾಹ ರಿಜಿಸ್ಟ್ರಾರನು, ಅಂಥ ಯಾವುದೇ ನೋಟೀಸನ್ನು ಸ್ವೀಕರಿಸಿದ ಮೇಲೆ ತನ್ನ ಕಚೇರಿಯ ಯಾವುದಾದರೊಂದು ಎದ್ದು ಕಾಣುವ ಸ್ಥಳದಲ್ಲಿ ಅದರ ಒಂದು ಪ್ರತಿಯನ್ನು ಅಂಟಿಸುವಂತೆ ಮಾಡತಕ್ಕುದು.

ವಿವಾಹವಾಗಲು ಉದ್ದೇಶಿಸಿರುವ ಪಕ್ಷಕಾರರಲ್ಲಿ ಒಬ್ಬರು ಅಪ್ರಾಪ್ತ ವಯಸ್ಕರಾಗಿರುವಲ್ಲಿ, ಪ್ರತಿಯೊಬ್ಬ ವಿವಾಹ ರಿಜಿಸ್ಟ್ರಾರನು, ಅಂಥ ವಿವಾಹದ ನೋಟೀಸನ್ನು ತಾನು ಸ್ವೀಕರಿಸಿದ ತರುವಾಯ ಇಪ್ಪತ್ತನಾಲ್ಕು ಗಂಟೆಗಳೊಳಗಾಗಿ ಅದೇ ಜಿಲ್ಲೆಯಲ್ಲಿರುವ ಇತರ ವಿವಾಹ ರಿಜಿಸ್ಟ್ರಾರರುಗಳಿಗೆ (ಯಾರಾದರೂ ಇದ್ದರೆ) ಪ್ರತಿಯೊಬ್ಬನಿಗೂ ಅಂಥ ನೋಟೀಸಿನ ಒಂದು ಪ್ರತಿಯನ್ನು ಅಂಚೆಯ ಮೂಲಕ ಅಥವಾ ಅನ್ಯಥಾ ಕಳುಹಿಸತಕ್ಕುದು. ಅವನು ಪ್ರತಿಯನ್ನು ಅದೇ ರೀತಿ ತನ್ನ ಸ್ವಂತ ಕಚೇರಿಯಲ್ಲಿ, ಯಾವುದಾದರೊಂದು ಎದ್ದು ಕಾಣುವ ಸ್ಥಳದಲ್ಲಿ ಅಂಟಿಸತಕ್ಕುದು.

40 ವಿವಾಹ ನೋಟೀಸು ಪುಸ್ತಕದಲ್ಲಿ ನೋಟೀಸನ್ನು ದಾಖಲು ಮಾಡತಕ್ಕುದು ಮತ್ತು ಪ್ರತಿಯನ್ನು ನಮೂದಿಸತಕ್ಕುದು.——ವಿವಾಹ ರಿಜಿಸ್ಟ್ರಾರನು ಅಂಥ ಎಲ್ಲ ನೋಟೀಸುಗಳನ್ನು ದಾಖಲು ಮಾಡತಕ್ಕುದು ಮತ್ತು ಅವುಗಳನ್ನು ತನ್ನ ಕಚೇರಿಯ ದಾಖಲೆಗಳೊಂದಿಗೆ ಇಡತಕ್ಕುದು ಮತ್ತು ರಾಜ್ಯ ಸರ್ಕಾರದಿಂದ ಆ ಉದ್ದೇಶಕ್ಕಾಗಿ ಅವನಿಗೆ ಒದಗಿಸಲಾಗುವ ಮತ್ತು ''ವಿವಾಹ ನೋಟೀಸು ಪುಸ್ತಕ'' ವೆಂದು ಕರೆಯಲಾಗುವ ಪುಸ್ತಕದಲ್ಲಿ ಅಂಥ ಎಲ್ಲ ನೋಟೀಸುಗಳ ಯಥಾಪ್ರತಿಯನ್ನು ಕೂಡ ತತ್‌ಕ್ಷಣ ನಮೂದಿಸತಕ್ಕುದು.

41 ಕೊಡಲಾದ ನೋಟೀಸಿನ ಮತ್ತು ಮಾಡಲಾದ ಪ್ರಮಾಣವಚನದ ಪ್ರಮಾಣ ಪತ್ರ.——ನೋಟೀಸನ್ನು ಕೊಟ್ಟಿರುವ ಪಕ್ಷಕಾರನು ಇದರಲ್ಲಿ ಇನ್ನು ಮುಂದೆ ನಮೂದಿಸಿದ ಪ್ರಮಾಣ ಪತ್ರವನ್ನು ಕೊಡಬೇಕೆಂದು ವಿವಾಹ ರಿಜಿಸ್ಟ್ರಾರನಲ್ಲಿ ವಿನಂತಿ ಮಾಡಿಕೊಂಡರೆ, ಮತ್ತು ವಿವಾಹವಾಗಲು ಉದ್ದೇಶಿಸಿರುವ ಪಕ್ಷಕಾರರಲ್ಲಿ ಒಬ್ಬರು ಇದರಲ್ಲಿ ಇನ್ನು ಮುಂದೆ ಅಗತ್ಯಪಡಿಸಿದಂತೆ ಪ್ರಮಾಣವಚನ ಮಾಡಿದ್ದರೆ, ವಿವಾಹ ರಿಜಿಸ್ಟ್ರಾರನು ಅಂಥ ನೋಟೀಸು ಕೊಟ್ಟಿರುವುದರ ಮತ್ತು ಅಂಥ ಪ್ರಮಾಣ ವಚನವನ್ನು ಮಾಡಿರುವುದರ ಬಗ್ಗೆ ತನ್ನ ಸಹಿಯೊಂದಿಗೆ ಪ್ರಮಾಣ ಪತ್ರವನ್ನು ಕೊಡತಕ್ಕುದು.

ಪರಂತುಕ

ಪರಂತು—

ಅಂಥ ಪ್ರಮಾಣ ಪತ್ರವನ್ನು ಏಕೆ ಕೊಡತಕ್ಕದ್ದಲ್ಲವೆಂಬುದಕ್ಕೆ ಅವನ ಸಮಾಧಾನಕ್ಕೆ ಯಾವ ಕಾನೂನುಬದ್ಧ ಅಡ್ಡಿಯನ್ನು ತೋರಿಸಿರತಕ್ಕದ್ದಲ್ಲ,

ಈ ಅಧಿನಿಯಮದ ಮೂಲಕ ಅಂಥ ಪ್ರಮಾಣ ಪತ್ರದ ಕೊಡುವಿಕೆಯು ಆ ಬಗ್ಗೆ ಅಧಿಕೃತನಾದ ಯಾವನೇ ವ್ಯಕ್ತಿಯಿಂದ ಇದರಲ್ಲಿ ಇನ್ನು ಮುಂದೆ ನಮೂದಿಸಿರುವ ರೀತಿಯಲ್ಲಿ ನಿಷೇಧಿತವಾಗಿರಕೂಡದು,

ನೋಟೀಸನ್ನು ಸ್ವೀಕರಿಸಿದ ಅನಂತರ ನಾಲ್ಕು ದಿವಸಗಳು ಮುಕ್ತಾಯವಾಗಿರತಕ್ಕದು ಮತ್ತು ಅಲ್ಲದೆ;

ವಿವಾಹವಾಗಲು ಉದ್ದೇಶಿಸಿರುವ ಪಕ್ಷಕಾರರಲ್ಲಿ ಒಬ್ಬರು ಅಪ್ರಾಪ್ತ ವಯಸ್ಕನೆಂದು ಅಂಥ ಪ್ರಮಾಣ ವಚನದಿಂದ ಕಂಡು ಬಂದಲ್ಲಿ, ಅಂಥ ನೋಟೀಸಿನ ನಮೂದನೆಯ ಅನಂತರ ಹದಿನಾಲ್ಕು ದಿವಸಗಳು ಮುಕ್ತಾಯವಾಗಿರತಕ್ಕದ್ದು.

42 ಪ್ರಮಾಣ ಪತ್ರವನ್ನು ಕೊಡುವುದಕ್ಕೆ ಮುಂಚೆ ಪ್ರಮಾಣ ವಚನ,—ವಿವಾಹವಾಗಲು ಉದ್ದೇಶಿಸಿರುವ ಪಕ್ಷಕಾರರಲ್ಲಿ ಒಬ್ಬನು ಅಂಥ ವಿವಾಹ ರಿಜಿಸ್ಟ್ರಾರನ ಮುಂದೆ ಖುದ್ದಾಗಿ ಹಾಜರಾಗುವವರೆಗೆ; ಮತ್ತು

(ಕ) ಸದರಿ ವಿವಾಹಕ್ಕೆ ರಕ್ತ ಸಂಬಂಧದ ಅಥವಾ ವಿವಾಹ ಸಂಬಂಧದ ಯಾವುದೇ ಅಡ್ಡಿ ಅಥವಾ ಇತರ ಕಾನೂನು ಬದ್ಧ ಆತಂಕವೂ ಇಲ್ಲ ಎಂದು ಅವನು ಅಥವಾ ಅವಳು ನಂಬುತ್ತಾರೆಂದು; ಮತ್ತು

(ಖ) ಇಬ್ಬರು ಪಕ್ಷಕಾರರೂ ತಮ್ಮ ಅಥವಾ (ಅವರು ಬೇರೆ ಬೇರೆ ವಿವಾಹ ರಿಜಿಸ್ಟ್ರಾರುಗಳ ಜಿಲ್ಲೆಗಳಲ್ಲಿ ವಾಸವಾಗಿದ್ದಲ್ಲಿ) ಅಂಥ ಪ್ರಮಾಣ ವಚನವನ್ನು ಮಾಡುವ ಪಕ್ಷಕಾರನು/ಳು ಅವರ, ಅವನ ಅಥವಾ ಅವಳ ಸಾಮಾನ್ಯ ವಾಸಸ್ಥಳವನ್ನು ಅಂಥ ವಿವಾಹ ರಿಜಿಸ್ಟ್ರಾರನ ಜಿಲ್ಲೆಯೊಳಗೆ ಹೊಂದಿದ್ದರೆ ಮತ್ತು ಆ ಪಕ್ಷಕಾರರಲ್ಲಿ ಯಾರಾದರೂ ಒಬ್ಬರು ಅಥವಾ ಪತ್ನಿಯೊಬ್ಬರೂ ಅಪ್ರಾಪ್ತ ವಯಸ್ಕರಾಗಿದ್ದಲ್ಲಿ;

(ಗ) ಕಾನೂನಿನ ಮೂಲಕ ಅಂಥ ವಿವಾಹಕ್ಕೆ ಅಗತ್ಯವಿರುವ, ಸಮ್ಮತಿ ಅಥವಾ ಸಮ್ಮತಿಗಳನ್ನು ಪಡೆದಿದೆ ಅಥವಾ ಪಡೆಯಲಾಗಿದೆ ಅಥವಾ ಸಂದರ್ಭಾನುಸಾರ, ಅಂಥ ಸಮ್ಮತಿಯನ್ನು ಕೊಡಲು ಅಧಿಕಾರವನ್ನು ಹೊಂದಿರುವ ಯಾವ ವ್ಯಕ್ತಿಯೂ ಭಾರತದಲ್ಲಿ ವಾಸವಾಗಿಲ್ಲ ಎಂದು ಪ್ರಮಾಣ ವಚನ ಮಾಡುವವರೆಗೆ ಯಾವನೇ ವಿವಾಹ ರಿಜಿಸ್ಟ್ರಾರನು 41ನೇ ಪ್ರಕರಣದಲ್ಲಿ ಹೇಳಲಾದ ಪ್ರಮಾಣ ಪತ್ರವನ್ನು ಕೊಡತಕ್ಕದ್ದಲ್ಲ.

43 ಹದಿನಾಲ್ಕಕ್ಕಿಂತ ಕಡಿಮೆ ದಿನಗಳಲ್ಲಿ ಪ್ರಮಾಣ ಪತ್ರವನ್ನು ಕೊಡುವಂತೆ ಆದೇಶ ಮಾಡುವುದಕ್ಕೆ ಉಚ್ಚ ನ್ಯಾಯಾಲಕ್ಕೆ ಅರ್ಜಿ,—ವಿವಾಹವಾಗಲು ಉದ್ದೇಶಿಸಿರುವ ಪಕ್ಷಕಾರರಲ್ಲಿ ಒಬ್ಬನು ಅಪ್ರಾಪ್ತ ವಯಸ್ಕನಾಗಿದ್ದಲ್ಲಿ, ಮತ್ತು ಅಂಥ ಇಬ್ಬರು ಪಕ್ಷಕಾರರು ಆ ಕಾಲದಲ್ಲಿ ಕಲ್ಕತ್ತ, ಮದ್ರಾಸು ಮತ್ತು ಮುಂಬಯಿ ಇವುಗಳ ಪೈಕಿ ಯಾವುದೇ ಪಟ್ಟಣದಲ್ಲಿ ವಾಸಿಸುತ್ತಿದ್ದಲ್ಲಿ, ಮತ್ತು ಮೇಲೆ ಹೇಳಿದಂತೆ ಅಂಥ ನೋಟೀಸಿನ ನಮೂದನೆಯ ನಂತರ ಹದಿನಾಲ್ಕಕ್ಕಿಂತ ಕಡಿಮೆ ದಿನಗಳಲ್ಲಿ ವಿವಾಹವಾಗಲು ಅಪೇಕ್ಷೆಯುಳ್ಳವರಾಗಿದ್ದಲ್ಲಿ 41ನೇ ಪ್ರಕರಣದ ಮೂಲಕ ಅಗತ್ಯಪಡಿಸಿರುವ ಸದರಿ ಹದಿನಾಲ್ಕು ದಿನಗಳು ಮುಕ್ತಾಯವಾಗುವುದಕ್ಕೆ ಮುಂಚೆ ವಿವಾಹದ ನೋಟೀಸನ್ನು ಯಾರಿಗೆ ಕೊಡಲಾಗಿದೆಯೋ ಆ ವಿವಾಹ ರಿಜಿಸ್ಟ್ರಾರನಿಗೆ ತನ್ನ ಪ್ರಮಾಣ ಪತ್ರವನ್ನು ಕೊಡುವಂತೆ ನಿರ್ದೇಶಿಸಿ ಆದೇಶ ಕೊಡಲು ಉಚ್ಚನ್ಯಾಯಾಲಯದ ನ್ಯಾಯಾಧೀಶನಿಗೆ ಅರ್ಜಿ ಮೂಲಕ ನಿವೇದಿಸಿಕೊಳ್ಳಬಹುದು.

ಅರ್ಜಿಯ ಮೇಲೆ ಆದೇಶ,—ಮತ್ತು ಸಾಕಷ್ಟು ಕಾರಣವನ್ನು ತೋರಿಸಿದ ಮೇಲೆ ಸದರಿ ನ್ಯಾಯಾಧೀಶನು ತನ್ನ ವಿವೇಚನೆಯಲ್ಲಿ ಹಾಗೆ ಅಗತ್ಯಪಡಿಸಿರುವ ಹದಿನಾಲ್ಕು ದಿನಗಳು ಮುಕ್ತಾಯವಾಗುವುದಕ್ಕೆ ಮುಂಚೆ ಸದರಿ ಆದೇಶದಲ್ಲಿ ನಮೂದಿಸಲಾಗುವ ಯಾವುದೇ ಕಾಲದಲ್ಲಿ ತನ್ನ ಪ್ರಮಾಣ ಪತ್ರವನ್ನು ಕೊಡುವಂತೆ ಅವನಿಗೆ ವಿವಾಹ ರಿಜಿಸ್ಟ್ರಾರನಿಗೆ ನಿರ್ದೇಶಿಸುವ ಆದೇಶವನ್ನು ಮಾಡಬಹುದು.

ಮತ್ತು ಸದರಿ ವಿವಾಹ ರಿಜಿಸ್ಟ್ರಾರನು, ಸದರಿ ಆದೇಶವನ್ನು ಸ್ವೀಕರಿಸಿದ ಮೇಲೆ ಅದಕ್ಕನುಸಾರವಾಗಿ ತನ್ನ ಪ್ರಮಾಣ ಪತ್ರವನ್ನು ಕೊಡತಕ್ಕದ್ದು.

44 ತಂದೆ ಅಥವಾ ಪಾಲಕನ ಸಮ್ಮತಿ.—19ನೇ ಪ್ರಕರಣದ ಉಪಬಂಧಗಳು ವಿವಾಹದ ಇಬ್ಬರು ಪಕ್ಷಕಾರರಲ್ಲಿ ಯಾರಾದರೂ ಒಬ್ಬರು ಅಪ್ರಾಪ್ತ ವಯಸ್ಕರಾಗಿದ್ದು, ಈ ಭಾಗದ ಮೇರೆಗೆ ನಡೆಯುವ ಪ್ರತಿಯೊಂದು ವಿವಾಹಕ್ಕೆ ಅನ್ವಯವಾಗುತ್ತದೆ.

ಪ್ರಮಾಣ ಪತ್ರವನ್ನು ಕೊಡುವುದರ ವಿರುದ್ಧ ಪ್ರತಿಭಟನೆ.—ಮತ್ತು ಅದರ ಮೇಲೆಗೆ ಅಂಥ ವಿವಾಹಕ್ಕೆ ಯಾರ ಸಮ್ಮತಿಯು ಅಗತ್ಯವಿದೆಯೋ ಅಂಥ ಯಾವನೇ ವ್ಯಕ್ತಿಯು ವಿವಾಹ ರಿಜಿಸ್ಟ್ರಾರನ ಪ್ರಮಾಣ ಪತ್ರವನ್ನು ಕೊಡುವುದಕ್ಕೆ ಮೊದಲು ಯಾವ ಕಾಲದಲ್ಲೇ ಆಗಲಿ ವಿವಾಹ ನೋಟೀಸು ಪುಸ್ತಕದಲ್ಲಿ ಅಂಥ ಉದ್ದೇಶಿತ ವಿವಾಹದ ನೋಟೀಸಿನ ನಮೂದನೆಯ ಎದುರಿನಲ್ಲಿ ನಿಷೇಧಿತ ಎಂಬ ಪದವನ್ನು ಬರೆಯುವುದರ ಮೂಲಕ ಮತ್ತು ಅದಕ್ಕೆ ಅವನ ಅಥವಾ ಅವಳ ಹೆಸರು ಮತ್ತು ವಾಸಸ್ಥಳ ಹಾಗೂ ಇಬ್ಬರು ಪಕ್ಷಕಾರದಲ್ಲಿ ಯಾರಾದರೂ ಒಬ್ಬರೊಂದಿಗಿರುವ ಯಾವ ಸಂಬಂಧದ ಕಾರಣದಿಂದಾಗಿ ಅವನು ಅಥವಾ ಅವಳು ಹಾಗೆ ಅಧಿಕೃತರಾಗಿದ್ದಾರೋ ಆ ಸಂಬಂಧವನ್ನು ಕಾಣಿಸುವ ಮೂಲಕ ಅಂಥ ಪ್ರಮಾಣ ಪತ್ರವನ್ನು ಕೊಡುವುದರ ವಿರುದ್ಧ ತನ್ನ ಪ್ರತಿಭಟನೆಯನ್ನು ನಮೂದಿಸಬಹುದು.

ಪ್ರತಿಭಟನೆಯ ಪರಿಣಾಮ.— ಅಂಥ ಪ್ರತಿಭಟನೆಯನ್ನು ನಮೂದಿಸಿರುವಾಗ, ವಿವಾಹ ರಿಜಿಸ್ಟ್ರಾರನು ಪ್ರತಿಭಟನೆಯ ವಿಷಯವನ್ನು ಪರಿಶೀಲಿಸುವವರೆಗೆ ಮತ್ತು ಸದರಿ ವಿವಾಹಕ್ಕೆ ಪ್ರಮಾಣ ಪತ್ರ ಕೊಡುವುದಕ್ಕೆ ಅದು ಅಡ್ಡಿಪಡಿಸತಕ್ಕುದಲ್ಲವೆಂದು ಸಮಾಧಾನಪಟ್ಟುಕೊಳ್ಳುವ ಅಥವಾ ಪ್ರತಿಭಟನೆಯನ್ನು ನಮೂದಿಸಿದ ವ್ಯಕ್ತಿಯು ಅದನ್ನು ಹಿಂತೆಗೆದು ಕೊಳ್ಳುವವರೆಗೆ ಯಾವುದೇ ಪ್ರಮಾಣ ಪತ್ರವನ್ನು ಕೊಡತಕ್ಕದ್ದಲ್ಲ.

45. ಯಾರ ಸಮ್ಮತಿಯು ಆವಶ್ಯಕವಾಗಿದೆಯೋ ಆ ವ್ಯಕ್ತಿಯು ಮನೋವಿಕಲನಾಗಿರುವಲ್ಲಿ ಅಥವಾ ಅನ್ಯಾಯವಾಗಿ ಸಮ್ಮತಿಯನ್ನು ತಡೆಹಿಡಿದಿರುವಲ್ಲಿ ಅರ್ಜಿ.— ಈ ಭಾಗದ ಮೇರೆಗೆ ಯಾವುದೇ ವಿವಾಹಕ್ಕೆ ಯಾರ ಸಮ್ಮತಿಯು ಆವಶ್ಯಕವಾಗಿದೆಯೋ ಆ ಯಾವನೇ ವ್ಯಕ್ತಿಯು ಅಸ್ವಸ್ಥಚಿತ್ತನಾಗಿದ್ದರೆ,

ಅಥವಾ ಅಂಥ ಯಾವನೇ ವ್ಯಕ್ತಿಯು (ತಂದೆಯನ್ನು ಹೊರತುಪಡಿಸಿ) ನ್ಯಾಯವಾದ ಕಾರಣವಿಲ್ಲದೆ ವಿವಾಹಕ್ಕೆ ತನ ಸಮ್ಮತಿಯನ್ನು ತಡೆಹಿಡಿದರೆ;

ಯಾರ ಸಮ್ಮತಿಯು ಆವಶ್ಯಕವಾಗಿದೆಯೋ ಆ ವ್ಯಕ್ತಿಯು ಕಲ್ಕತ್ತ, ಮದ್ರಾಸ್, ಮತ್ತು ಮುಂಬಯಿ, ಇವುಗಳ ಪೈಕಿ ಯಾವುದೇ ಪಟ್ಟಣದಲ್ಲಿನ ನಿವಾಸಿಯಾಗಿದ್ದರೆ ವಿವಾಹವಾಗಲು ಉದ್ದೇಶಿಸಿರುವ ಪಕ್ಷಕಾರರು ಉಚ್ಚ ನ್ಯಾಯಾಲಯದ ನ್ಯಾಯಾಧೀಶನಿಗೆ ಅಥವಾ ಅವನು ಸದರಿ ಪಟ್ಟಣಗಳೊಳಗೆ ಯಾವುದರಲ್ಲೂ ನಿವಾಸಿಯಾಗಿಲ್ಲದಿದ್ದರೆ ಆಗ, ಜಿಲ್ಲಾ ನ್ಯಾಯಾಧೀಶನಿಗೆ ಅರ್ಜಿಯ ಮೂಲಕ ನಿವೇದಿಸಿಕೊಳ್ಳಬಹುದು,

ಅರ್ಜಿ ಮೇಲಿನ ಪ್ರಕ್ರಿಯೆ.— ಮತ್ತು ಸಂದರ್ಭಾನುಸಾರ ಉಚ್ಚ ನ್ಯಾಯಾಲಯದ ಸದರಿ ನ್ಯಾಯಾಧೀಶನು ಅಥವಾ ಜಿಲ್ಲಾ ನ್ಯಾಯಾಧೀಶನು ಅರ್ಜಿಯ ಆಪಾದನೆಗಳನ್ನು ಸಂಕ್ಷಿಪ್ತ ರೀತಿಯಲ್ಲಿ ಪರಿಶೀಲಿಸಬಹುದು,

ಮತ್ತು ಪರಿಶೀಲಿಸಿದ ಮೇಲೆ ಅಂಥ ವಿವಾಹವು ಯುಕ್ತವಾಗಿದೆಯೆಂದು ಕಂಡುಬಂದರೆ ಸಂದರ್ಭಾನುಸಾರ ಉಚ್ಚ ನ್ಯಾಯಾಲಯದ ಅಂಥ ನ್ಯಾಯಾಧೀಶನು ಅಥವಾ ಜಿಲ್ಲಾ ನ್ಯಾಯಾಧೀಶನು ಆ ವಿವಾಹವು ಯುಕ್ತ ವಿವಾಹವಾಗಿದೆಯೆಂದು ಘೋಷಿಸತಕ್ಕದ್ದು,

ಅಂಥ ಘೋಷಣೆಯು ಯಾರ ಸಮ್ಮತಿಯು ಅಗತ್ಯವಾಗಿತ್ತೊ ಆ ವ್ಯಕ್ತಿಯು ವಿವಾಹಕ್ಕೆ ಸಮ್ಮತಿಸಿದ್ದರೆ, ಹೇಗೋ ಹಾಗೆ ಪರಿಣಾಮಕಾರಿಯಾಗತಕ್ಕದ್ದು,

ಮತ್ತು ವಿವಾಹ ರಿಜಿಸ್ಟ್ರಾರನ ಪ್ರಮಾಣಪತ್ರದ ಕೊಡುವಿಕೆಯನ್ನು ಅವನು ನಿಷೇಧಿಸಿದರೆ ಅಂಥ ಪ್ರಮಾಣ ಪತ್ರವನ್ನು ಕೊಡತಕ್ಕದ್ದು ಮತ್ತು ಅಂಥ ಪ್ರಮಾಣ ಪತ್ರದ ಕೊಡುವಿಕೆಯನ್ನು ನಿಷೇಧಿಸಿರದಿದ್ದರೆ ಹೇಗೋ ಹಾಗೆ ವಿವಾಹಕ್ಕೆ ಸಂಬಂಧಿಸಿದಂತೆ ಈ ಭಾಗದ ಮೇರೆಗೆ ಅಂಥವೇ ವ್ಯವಹರಣೆಯನ್ನು ನಡೆಸಬಹುದು.

46. ವಿವಾಹ ರಿಜಿಸ್ಟ್ರಾರನು ಪ್ರಮಾಣ ಪತ್ರವನ್ನು ನಿರಾಕರಿಸಿದಾಗ ಅರ್ಜಿ:— ಈ ಭಾಗದ ಮೇರೆಗೆ ಪ್ರಮಾಣ ಪತ್ರವನ್ನು ಕೊಡಲು ವಿವಾಹ ರಿಜಿಸ್ಟ್ರಾರನು ನಿರಾಕರಿಸಿದಾಗಲೆಲ್ಲ ಅಂಥ ರಿಜಿಸ್ಟ್ರಾರನ ಜಿಲ್ಲೆಯು ಕಲ್ಕತ್ತ, ಮದ್ರಾಸು ಮತ್ತು ಮುಂಬಯಿ, ಅವುಗಳ ಪೈಕಿ ಯಾವುದೇ ಪಟ್ಟಣದೊಳಗಿದ್ದರೆ, ವಿವಾಹವಾಗಲು ಉದ್ದೇಶಿಸಿರುವ ಪಕ್ಷಕಾರರಲ್ಲಿ ಯಾರಾದರೂ ಒಬ್ಬರು ಉಚ್ಚ ನ್ಯಾಯಾಲಯದ ನ್ಯಾಯಾಧೀಶನಿಗೆ ಅಥವಾ ಅಂಥ ಜಿಲ್ಲೆಯು ಸದರಿ ಪಟ್ಟಣಗಳಲ್ಲಿ ಯಾವುದರಲ್ಲಿಯೂ ಇಲ್ಲದಿದ್ದರೆ, ಆಗ ಜಿಲ್ಲಾ ನ್ಯಾಯಾಧೀಶನಿಗೆ ಅರ್ಜಿಯ ಮೂಲಕ ನಿವೇದಿಸಿಕೊಳ್ಳಬಹುದು,

ಅರ್ಜಿಯ ಮೇಲಿನ ಪ್ರಕ್ರಿಯೆ— ಸಂದರ್ಭಾನುಸಾರ ಉಚ್ಚ ನ್ಯಾಯಾಲಯದ ಸದರಿ ನ್ಯಾಯಾಧೀಶನು ಅಥವಾ ಜಿಲ್ಲಾ ನ್ಯಾಯಾಧೀಶನು ಅರ್ಜಿಯ ಆಪಾದನೆಗಳನು ಸಂಕ್ಷಿಪ್ತ ರೀತಿಯಲ್ಲಿ ಪರಿಶೀಲಿಸಬಹುದು ಮತ್ತು ಅದರ ಮೇಲೆ ತೀರ್ಮಾನಿಸತಕ್ಕದ್ದು,

ಸಂದರ್ಭಾನುಸಾರ ಉಚ್ಚ ನ್ಯಾಯಾಲಯದ ಅಂಥ ನ್ಯಾಯಾಧೀಶ ಅಥವಾ ಜಿಲ್ಲಾ ನ್ಯಾಯಾಧೀಶನ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಪ್ರಮಾಣ ಪತ್ರವನ್ನು ಕೊಡುವುದಕ್ಕಾಗಿ ಮೂಲತಃ ಯಾರಿಗೆ ಅರ್ಜಿ ಹಾಕಿಕೊಳ್ಳಲಾಗಿತ್ತೊ, ಆ ವಿವಾಹ ರಿಜಿಸ್ಟ್ರಾರನು ಅದಕ್ಕನುಸಾರವಾಗಿ ಮುಂದುವರಿಯತಕ್ಕದ್ದು.

47. (ಭಾರತ ರಾಜ್ಯದಲ್ಲಿ ವಿವಾಹ ರಿಜಿಸ್ಟ್ರಾರನು ಪ್ರಮಾಣ ಪತ್ರವನ್ನು ನಿರಾಕರಿಸಿದಾಗ ಅರ್ಜಿ 1950ರ ಎ.ಓ. ಮೂಲಕ ನಿರಸಿತವಾಗಿದೆ.)

48. ನಿಷೇಧಿಸುವ ವ್ಯಕ್ತಿಯ ಅಧಿಕಾರದ ಬಗ್ಗೆ ರಿಜಿಸ್ಟ್ರಾರನಿಗೆ ಸಂದೇಹ ಬಂದಾಗ ಅರ್ಜಿ.— 44ನೇ ಪ್ರಕರಣದ ಉಪಬಂಧಗಳ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ, ವಿವಾಹ ರಿಜಿಸ್ಟ್ರಾರನಿಗೆ ಪ್ರಮಾಣ ಪತ್ರ ಕೊಡುವುದನ್ನು ನಿಷೇಧಿಸುವ ವ್ಯಕ್ತಿಯು ಹಾಗೆ ಮಾಡಲು ಕಾನೂನಿನ ಮೂಲಕ ಅಧಿಕೃತನಾಗಿದ್ದಾನೆಂದು ಸಮಾಧಾನವಾಗದಿದ್ದಾಗಲೆಲ್ಲಾ ಸದರಿ ವಿವಾಹ ರಿಜಿಸ್ಟ್ರಾರನು ಕಲ್ಕತ್ತ. ಮದ್ರಾಸು ಮತ್ತು ಮುಂಬಯಿ ಇವುಗಳ ಪೈಕಿ ಯಾವುದೇ ಪಟ್ಟಣದಲ್ಲಿ ಅವನ ಜಿಲ್ಲೆ ಇರುವಲ್ಲಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಿಗೆ ಅಥವಾ ಅಂಥ ಜಿಲ್ಲೆಯು ಸದರಿ ಪಟ್ಟಣಗಳಲ್ಲಿ ಯಾವುದರಲ್ಲಿಯೂ ಇಲ್ಲದಿದ್ದರೆ ಆಗ ಜಿಲ್ಲಾ ನ್ಯಾಯಾಧೀಶನಿಗೆ ಅರ್ಜಿಯ ಮೂಲಕ ನಿವೇದಿಸಿಕೊಳ್ಳತಕ್ಕದ್ದು,

ಅರ್ಜಿಯ ಮೇಲಿನ ಪ್ರಕ್ರಿಯೆ.— ಸದರಿ ಅರ್ಜಿಯು ಪ್ರಕರಣದ ಎಲ್ಲ ಸಂದರ್ಭಗಳನ್ನು ನಿರೂಪಿಸತಕ್ಕದ್ದು ಮತ್ತು ಅದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶ ಮತ್ತು ನಿರ್ದೇಶನಕ್ಕಾಗಿ ಪ್ರಾರ್ಥಿಸತಕ್ಕದ್ದು.

ಮತ್ತು ಸಂದರ್ಭಾನುಸಾರ ಉಚ್ಚ ನ್ಯಾಯಾಲಯದ ಸದರಿ ನ್ಯಾಯಾಧೀಶನು ಅಥವಾ ಜಿಲ್ಲಾ ನ್ಯಾಯಾಧೀಶನು ಅರ್ಜಿಯ ಆಪಾದನೆಗಳನ್ನು ಮತ್ತು ಪ್ರಕರಣದ ಸಂದರ್ಭಗಳನ್ನು ಪರಿಶೀಲಿಸತಕ್ಕದ್ದು,

ಮತ್ತು ಅಂಥ ಪರಿಶೀಲನೆಯ ಮೇಲೆ, ಅಂಥ ಪ್ರಮಾಣಪತ್ರವನ್ನು ಕೊಡಲು ನಿಷೇಧಿಸುವ ವ್ಯಕ್ತಿಯು ಹಾಗೆ ಮಾಡಲು ಕಾನೂನಿನ ಮೂಲಕ ಅಧಿಕೃತನಾಗಿಲ್ಲವೆಂದು ಕಂಡು ಬಂದರೆ, ಸಂದರ್ಭಾನುಸಾರ ಉಚ್ಚ ನ್ಯಾಯಾಲಯದ ಅಂಥ ನ್ಯಾಯಾಧೀಶನು ಅಥವಾ ಜಿಲ್ಲಾ ನ್ಯಾಯಾಧೀಶನು ಅಂಥ ಪ್ರಮಾಣ ಪತ್ರ ಕೊಡುವುದನ್ನು ನಿಷೇಧಿಸುವ ವ್ಯಕ್ತಿಯು ಮೇಲೆ ಹೇಳಿದಂತೆ ಅಧಿಕೃತನಾಗಿಲ್ಲವೆಂದು ಘೋಷಿಸತಕ್ಕದ್ದು,

ಮತ್ತು ಅದರ ಮೇಲೆ ಅಂಥ ಪ್ರಮಾಣ ಪತ್ರವನ್ನು ಕೊಡತಕ್ಕದ್ದು ಮತ್ತು ಕೊಡುವುದನ್ನು ನಿಷೇಧಿಸದಿರದಿದ್ದರೆ ಹೇಗೋ ಹಾಗೆ ಅಂಥ ವಿವಾಹದ ಸಂಬಂಧದಲ್ಲಿ ಅಂಥದೇ ವ್ಯವಹರಣೆಗಳನ್ನು ನಡೆಸಬಹುದು.

49. ಪ್ರಮಾಣ ಪತ್ರವನ್ನು ಕೊಡುವುದರ ವಿರುದ್ಧ ಕ್ಷುಲ್ಲಕ ಪ್ರತಿಭಟನೆಗಾಗಿ ಹೊಣೆಗಾರಿಕೆ;—44ನೇ ಪ್ರಕರಣದ ಮೇರೆಗೆ ಅಂಥ ವಿವಾಹ ರಿಜಿಸ್ಟ್ರಾರನು ಅಥವಾ 45ನೇ ಅಥವಾ 46ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶನು ಅಥವಾ ಜಿಲ್ಲಾ ನ್ಯಾಯಾಧೀಶನು ಯಾವ ಆಧಾರಗಳ ಮೇಲೆ ಕ್ಷುಲ್ಲಕವೆಂದು ಮತ್ತು ಪ್ರಮಾಣ ಪತ್ರ ಕೊಡುವುದನ್ನು ಅಡ್ಡಿಪಡಿಸತಕ್ಕುದಂಥದಲ್ಲವೆಂದು ಘೋಷಿಸುತ್ತಾನೋ ಆ ಆಧಾರಗಳ ಮೇಲೆ ಈ ಭಾಗದ ಮೇರೆಗೆ ಯಾವುದೇ ಪ್ರಮಾಣಪತ್ರ ಕೊಡುವುದರ ವಿರುದ್ಧ ವಿವಾಹ ರಿಜಿಸ್ಟ್ರಾರನ ಬಳಿಗೆ ಪ್ರತಿಭಟನೆ ನಮೂದಿಸುವ ಪ್ರತಿಯೊಬ್ಬ ವ್ಯಕ್ತಿಯು ಅದಕ್ಕೆ ಸಂಬಂಧಪಟ್ಟ ಎಲ್ಲ ವ್ಯವಹರಣೆಗಳ ಖರ್ಚುಗಳಿಗೆ ಮತ್ತು ಹಾನಿಗಳಿಗೆ ಹೊಣೆಗಾರನಾಗಿರತಕ್ಕುದು. ಹಾಗೂ ಯಾವ ವ್ಯಕ್ತಿಯ ವಿವಾಹದ ವಿರುದ್ಧ ಅಂಥ ಪ್ರತಿಭಟನೆಯನ್ನು ನಮೂದಿಸಲಾಗಿತ್ತೋ ಆ ವ್ಯಕ್ತಿಯು ದಾವೆಯ ಮೂಲಕ ಅವುಗಳನ್ನು ವಸೂಲು ಮಾಡಿಕೊಳ್ಳತಕ್ಕುದು.

50. ಪ್ರಮಾಣ ಪತ್ರದ ನಮೂನೆ — 41ನೇ ಪ್ರಕರಣದ ಉಪಬಂಧಗಳ ಮೇರೆಗೆ ವಿವಾಹ ರಿಜಿಸ್ಟ್ರಾರನು ಕೊಡಬೇಕಾಗಿರುವ ಪ್ರಮಾಣ ಪತ್ರವು ಈ ಅಧಿನಿಯಮಕ್ಕೆ ಅನುಬಂಧಿತವಾಗಿರುವ ಎರಡನೇ ಅನುಸೂಚಿಯಲ್ಲಿ ಅಡಕವಾಗಿರುವ ನಮೂನೆಯಲ್ಲಿ ಅಥವಾ ಅದೇ ರೀತಿಯ ನಮೂನೆಯಲ್ಲಿರತಕ್ಕುದು,

ಮತ್ತು ರಾಜ್ಯ ಸರ್ಕಾರವು ಸಾಕಷ್ಟು ಸಂಖ್ಯೆಯ ಪ್ರಮಾಣ ಪತ್ರದ ನಮೂನೆಗಳನ್ನು ಪ್ರತಿಯೊಬ್ಬ ವಿವಾಹ ರಿಜಿಸ್ಟ್ರಾರನಿಗೆ ಒದಗಿಸತಕ್ಕುದು.

51. ಪ್ರಮಾಣ ಪತ್ರವನ್ನು ಕೊಟ್ಟ ನಂತರ ವಿವಾಹವನ್ನು ವಿಧಿವತ್ತಾಗಿ ನೆರವೇರಿಸುವುದು— ವಿವಾಹ ರಿಜಿಸ್ಟ್ರಾರನು ಪ್ರಮಾಣ ಪತ್ರವನ್ನು ಕೊಟ್ಟ ಅನಂತರ.

ಅಥವಾ, ಬೇರೆ ಬೇರೆ ಜಿಲ್ಲೆಗಳ ವಿವಾಹ ರಿಜಿಸ್ಟ್ರಾರರುಗಳಿಗೆ ಈ ಅಧಿನಿಯಮದ ಮೇರೆಗೆ ನೋಟೀಸನ್ನು ಕೊಡಬೇಕೆಂದು ಅಗತ್ಯಪಡಿಸಿರುವಲ್ಲಿ, ಅಂಥ ಜಿಲ್ಲೆಗಳ ವಿವಾಹ ರಿಜಿಸ್ಟ್ರಾರರುಗಳ ಪ್ರಮಾಣ ಪತ್ರಗಳನ್ನು ಕೊಟ್ಟ ಅನಂತರ ಅಂಥ ಪ್ರಮಾಣ ಪತ್ರ ಅಥವಾ ಪ್ರಮಾಣ ಪತ್ರಗಳಲ್ಲಿ ವಿವರಿಸಿರುವ ಪಕ್ಷಕಾರರ ವಿವಾಹಕ್ಕೆ ಕಾನೂನುಬದ್ಧ ಅಡ್ಡಿಯು ಇರದಿದ್ದರೆ, ಅವರು ಅಂಗೀಕರಿಸಲು ಸೂಕ್ತವೆಂದು ಭಾವಿಸುವಂಥ ರೀತಿ ಮತ್ತು ಕರ್ಮಾಚರಣೆಗೆ ಅನುಸಾರವಾಗಿ ಅವರ ನಡುವೆ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಬಹುದು,

ಆದರೆ ಅಂಥ ಪ್ರತಿಯೊಂದು ವಿವಾಹವು ಯಾವನಾದರೂ ವಿವಾಹ ರಿಜಿಸ್ಟ್ರಾರನ (ಮೇಲೆ ಹೇಳಿದಂತೆ ಯಾವನಿಗೆ ಅಂಥ ಪ್ರಮಾಣ ಪತ್ರ ಅಥವಾ ಪ್ರಮಾಣ ಪತ್ರಗಳನ್ನು ಒಪ್ಪಿಸಬೇಕಾಗಿದೆಯೋ ಅವನು) ಮತ್ತು ವಿವಾಹ ರಿಜಿಸ್ಟ್ರಾರನಲ್ಲದೆ ಇಬ್ಬರು ಅಥವಾ ಹೆಚ್ಚಿನ ನಂಬಲರ್ಹ ಸಾಕ್ಷಿದಾರರ ಸಮ್ಮುಖದಲ್ಲಿ ವಿಧಿವತ್ತಾಗಿ ನೆರವೇರಿಸತಕ್ಕುದು,

ಮತ್ತು ಕರ್ಮಾಚರಣೆಯ ಯಾವುದೇ ಒಂದು ಭಾಗದಲ್ಲಿ ಪ್ರತಿಯೊಬ್ಬ ಪಕ್ಷಕಾರನು ಈ ಕೆಳಕಂಡಂತೆ ಅಥವಾ ಅದೇ ಪರಿಣಾಮವುಳ್ಳಂತೆ ಘೋಷಿಸತಕ್ಕುದು.

''ಕ, ಖ, ನಾದ ನಾನು ವಿವಾಹ ಸಂಬಂಧದಲ್ಲಿ ಏಕೆ ಗ, ಘ,ನೊಡನೆ ಸೇರಬಾರದೆಂಬುದಕ್ಕೆ ಯಾವುದೇ ಕಾನೂನುಬದ್ಧ ಅಡ್ಡಿ ಇರುವುದು ನನಗೆ ಗೊತ್ತಿಲ್ಲವೆಂದು ಶ್ರದ್ಧಾಪೂರ್ವಕವಾಗಿ ಘೋಷಿಸುತ್ತೇನೆ.'' ಮತ್ತು ಪ್ರತಿಯೊಬ್ಬ ಪಕ್ಷಕಾರನು ಕೆಳಕಂಡಂತೆ ಅಥವಾ ಅದೇ ಪರಿಣಾಮವುಳ್ಳಂತೆ ಇನ್ನೊಬ್ಬನಿಗೆ ಹೇಳತಕ್ಕುದು.—

''ಕ,ಖ ನಾದ ನಾನು ಗ,ಘ, ಆದ ನಿನ್ನನ್ನು ನನ್ನ ಕಾನೂನುಬದ್ಧ ವಿವಾಹಿತ ಪತ್ನಿ (ಅಥವಾ ಪತಿ)ಯಾಗಿ ಸ್ವೀಕರಿಸಿದ್ದೇನೆಂಬುದಕ್ಕೆ ಸಾಕ್ಷಿದಾರರಾಗಿರಲು ಇಲ್ಲಿ ಹಾಜರಿರುವ ವ್ಯಕ್ತಿಗಳನ್ನು ನಾನು ಕೋರುತ್ತೇನೆ.''

52. ನೋಟೀಸು ಕೊಟ್ಟ ತರುವಾಯ ಎರಡು ತಿಂಗಳೊಳಗೆ ವಿವಾಹವು ನೆರವೇರದಿರುವಾಗ ಹೊಸ ನೋಟೀಸಿನ ಅಗತ್ಯ.—40ನೇ ಪ್ರಕರಣದ ಮೇರೆಗೆ ಅಗತ್ಯವಿರುವಂತೆ ವಿವಾಹ ರಿಜಿಸ್ಟ್ರಾರನಿಂದ ನೋಟೀಸಿನ ಪ್ರತಿಯನ್ನು ನಮೂದಿಸಿದ ತರುವಾಯ ಎರಡು ತಿಂಗಳೊಳಗಾಗಿ ವಿವಾಹವು ವಿಧಿವತ್ತಾಗಿ ನೆರವೇರದಿದ್ದಾಗಲೆಲ್ಲ, ಆ ಮೇಲೆ ಕೊಡಲಾದ ನೋಟೀಸು ಮತ್ತು ಪ್ರಮಾಣಪತ್ರ ಯಾವುದಾದರೂ ಇದ್ದರೆ ಅದು ಮತ್ತು ಆ ಮೇಲಿನ ಇತರ ಎಲ್ಲ ವ್ಯವಹರಣೆಗಳು ಶೂನ್ಯವಾಗತಕ್ಕುದು.

ಮತ್ತು ಮೇಲೆ ಹೇಳಿದ ಕಾಲದಲ್ಲಿ ಮತ್ತು ರೀತಿಯಲ್ಲಿ ಹೊಸ ನೋಟೀಸನ್ನು ಕೊಡುವವರೆಗೆ, ಮತ್ತು ಅದನ್ನು ನಮೂದಿಸುವವರೆಗೆ ಮತ್ತು ಆದರ ಪ್ರಮಾಣ ಪತ್ರವನ್ನು ಕೊಡುವವರೆಗೆ, ಯಾವನೇ ವ್ಯಕ್ತಿಯು ವಿವಾಹವನ್ನು ವಿಧಿವತ್ತಾಗಿ ನೆರವೇರಿಸಲು ಮುಂದುವರಿಯತಕ್ಕುದಲ್ಲ ಅಥವಾ ಯಾವನೇ ವಿವಾಹ ರಿಜಿಸ್ಟ್ರಾರನು ಅದನ್ನು ನಮೂದಿಸತಕ್ಕುದಲ್ಲ.

53. ವಿವಾಹ ರಿಜಿಸ್ಟ್ರಾರನು ನೋಂದಾಯಿಸಬೇಕಾದ ವಿವರಗಳಿಗಾಗಿ ಕೇಳಬಹುದು.— ಈ ಭಾಗದ ಮೇರೆಗೆ ಯಾರ ಮುಂದೆ ಯಾವುದೇ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಲಾಗುವುದೋ ಆ ವಿವಾಹ ರಿಜಿಸ್ಟ್ರಾರನು ಅಂಥ ವಿವಾಹದ ಸಂಬಂಧದಲ್ಲಿ ನೋಂದಾಯಿಸಲು ಅಗತ್ಯವಿರುವ ಹಲವು ವಿವರಗಳನ್ನು ವಿವಾಹವಾಗಲಿರುವ ವ್ಯಕ್ತಿಗಳಿಗೆ ಕೇಳಬಹುದು.

54. Vನೇ ಭಾಗದ ಮೇರೆಗೆ ವಿಧಿವತ್ತಾಗಿ ನೆರವೇರಿಸಿದ ವಿವಾಹಗಳ ನೋಂದಣಿ.— ಈ ಭಾಗದ ಮೇರೆಗೆ ಯಾವುದೇ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಿದ ತರುವಾಯ ಅಂಥ ವಿಧಿವತ್ತಾದ ನೆರವೇರಿಕೆಯಲ್ಲಿ ಹಾಜರಿರುವ ವಿವಾಹ ರಿಜಿಸ್ಟ್ರಾರನು ತತ್‌ಕ್ಷಣ ದ್ವಿಪ್ರತಿಯಲ್ಲಿ ವಿವಾಹವನ್ನು ನೋಂದಾಯಿಸತಕ್ಕುದು, ಅಂದರೆ ಇದಕ್ಕೆ ಅನುಬಂಧಿಸಿರುವ ನಾಲ್ಕನೇ ಅನುಸೂಚಿಯ ನಮೂನೆಗನುಸಾರವಾಗಿ, ವಿವಾಹ ನೋಂದಣಿ ಪುಸ್ತಕದಲ್ಲಿ ಮತ್ತು ವಿವಾಹ ನೋಂದಣಿ ಪುಸ್ತಕಕ್ಕೆ ಪಕ್ಕಪ್ರತಿಯಂತೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ಸಹ ನೋಂದಾಯಿಸತಕ್ಕುದು.

ಪ್ರಮಾಣಪತ್ರ ಮತ್ತು ವಿವಾಹ ರಿಜಿಸ್ಟರು ಪುಸ್ತಕ ಇವೆರಡರಲ್ಲೂ ಅಂಥ ವಿವಾಹದ ನಮೂದನೆಗೆ ಯಾವ ವ್ಯಕ್ತಿಯಿಂದ ಅಥವಾ ಯಾವ ವ್ಯಕ್ತಿಯ ಮುಂದೆ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಲಾಗಿದೆಯೋ ಆ ವ್ಯಕಿಯು, ಅಂಥ ಯಾವನೇ ವ್ಯಕ್ತಿಯಿದ್ದರೆ, ಮತ್ತು ಅಂಥ ವಿವಾಹದಲ್ಲಿ ಹಾಜರಿರುವ ವಿವಾಹ ರಿಜಿಸ್ಟ್ರಾರನು ವಿವಾಹವನ್ನು ಅವನು ವಿಧಿವತ್ತಾಗಿ ನೆರವೇರಿಸಿರಲಿ ಅಥವಾ ಇಲ್ಲದಿರಲಿ ಮತ್ತು ವಿವಾಹವಾದ ಪಕ್ಷಕಾರರೂ ಸಹ ಸಹಿ ಮಾಡತಕ್ಕದು ಹಾಗೂ ವಿವಾಹ ರಿಜಿಸ್ಟ್ರಾರನನ್ನು ಮತ್ತು ವಿವಾಹವನ್ನು ಅನುಷ್ಠಾನಿಸುವ ವ್ಯಕ್ತಿಯನ್ನು ಹೊರತುಪಡಿಸಿ ಇಬ್ಬರು ನಂಬಲರ್ಹ ಸಾಕ್ಷಿದಾರರು ಅದನ್ನು ಅನುಪ್ರಮಾಣೀಕರಿಸತಕ್ಕದು,

ಅಂಥ ಪ್ರತಿಯೊಂದು ನಮೂದನೆಯನ್ನು ಪುಸ್ತಕದ ಮೊದಲಿನಿಂದ ಕೊನೆಯವರೆಗೆ ಕ್ರಮವಾಗಿ ಮಾಡತಕ್ಕದ್ದು ಮತ್ತು ಪ್ರಮಾಣ ಪತ್ರದ ಸಂಖ್ಯೆಯು ವಿವಾಹ ರಿಜಿಸ್ಟರು ಪುಸ್ತಕದ ನಮೂದನೆಯೊಡನೆ ಸಂವಾದಿಯಾಗಿರತಕ್ಕದ್ದು.

55. ರಿಜಿಸ್ಟ್ರಾರ್ ಜನರಲ್ಲನಿಗೆ ಮಾಸಿಕವಾಗಿ ಪ್ರಮಾಣಪತ್ರಗಳನ್ನು ಕಳುಹಿಸತಕ್ಕದು:—ವಿವಾಹ ರಿಜಿಸ್ಟ್ರಾರ್‌ನು ವಿವಾಹ ರಿಜಿಸ್ಟರು ಪುಸ್ತಕದಿಂದ ಪ್ರಮಾಣಪತ್ರವನ್ನು ತತ್‌ಕ್ಷಣವೇ ಪ್ರತ್ಯೇಕಿಸತಕ್ಕದು ಮತ್ತು ಪ್ರತಿ ತಿಂಗಳ ಕೊನೆಯಲ್ಲಿ ಅದನ್ನು ಜನನ ಮರಣ ಮತ್ತು ವಿವಾಹಗಳ ರಿಜಿಸ್ಟ್ರಾರ್ ಜನರಲ್ಲನಿಗೆ ಕಳುಹಿಸತಕ್ಕದ್ದು.

ರಿಜಿಸ್ಟರು ಪುಸ್ತಕದ ಅಭಿರಕ್ಷೆ :—ವಿವಾಹ ರಿಜಿಸ್ಟ್ರಾರನು ಸದರಿ ರಿಜಿಸ್ಟರು ಪುಸ್ತಕವನ್ನು ಅದು ಭರ್ತಿಯಾಗುವ ವರೆಗೆ ರಕ್ಷಿತವಾಗಿ ಇಟ್ಟಿರತಕ್ಕದ್ದು ಮತ್ತು ಅನಂತರ ಜನನ ಮರಣ ಮತ್ತು ವಿವಾಹಗಳ ರಿಜಿಸ್ಟ್ರಾರ್ ಜನರಲ್ಲನಿಗೆ ಅವನ ಕಚೇರಿಯ ದಾಖಲೆಗಳೊಂದಿಗೆ ಇಟ್ಟುಕೊಂಡಿರುವುದಕ್ಕಾಗಿ ಅವನು ಕಳುಹಿಸತಕ್ಕದು.

56. [ಭಾರತ ರಾಜ್ಯಗಳಲ್ಲಿನ ರಿಜಿಸ್ಟ್ರಾರರುಗಳು ಯಾವ ಅಧಿಕಾರಿಗಳಿಗೆ ಪ್ರಮಾಣಪತ್ರಗಳನ್ನು ಕಳುಹಿಸತಕ್ಕದು]:—1950ರ ಎ. ಒ. ಮೂಲಕ ನಿರಸಿತವಾಗಿದೆ.

57. ಭಾರತೀಯ ಕ್ರೈಸ್ತರು ನೋಟೀಸ್ ಮತ್ತು ಪ್ರಮಾಣಪತ್ರವನ್ನು ಅರ್ಥಮಾಡಿಕೊಳ್ಳುತಾರೆಯೋ ಎಂಬುದನ್ನು ರಿಜಿಸ್ಟ್ರಾರರು ಖಚಿತಪಡಿಸಿಕೊಳ್ಳುವುದು;—ವಿವಾಹವಾಗಲಿರುವ ಯಾವನೇ ಭಾರತೀಯ ಕ್ರೈಸ್ತನು ವಿವಾಹದ ನೋಟೀಸನ್ನು ಕೊಟ್ಟರೆ ಅಥವಾ ವಿವಾಹ ರಿಜಿಸ್ಟ್ರಾರನಿಂದ ಪ್ರಮಾಣಪತ್ರವನ್ನು ಪಡೆಯಲು ಅರ್ಜಿಸಲ್ಲಿಸಿದರೆ ಅಂಥ ವಿವಾಹ ರಿಜಿಸ್ಟ್ರಾರನು ಸದರಿ ಭಾರತೀಯ ಕ್ರೈಸ್ತನು ಇಂಗ್ಲಿಷ್ ಭಾಷೆಯನ್ನು ಅರ್ಥಮಾಡಿಕೊಳ್ಳುತ್ತಾನೆಯೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದು ಮತ್ತು ಅವನು ಅರ್ಥ ಮಾಡಿಕೊಳ್ಳದಿದ್ದರೆ ವಿವಾಹ ರಿಜಿಸ್ಟ್ರಾರನು ಅಂಥ ಭಾರತೀಯ ಕ್ರೈಸ್ತನಿಗೆ ಸಂದರ್ಭಾನುಸಾರ, ಅವನು ಮಾಡಿಕೊಳ್ಳಬಹುದಾದ ಭಾಷೆಗೆ ಅಂಥ ನೋಟೀಸು ಅಥವಾ ಪ್ರಮಾಣಪತ್ರ ಅಥವಾ ಅವೆರಡನ್ನೂ ಭಾಷಾಂತರಿಸತಕ್ಕದು ಅಥವಾ ಭಾಷಾಂತರಿಸುವಂತೆ ಮಾಡತಕ್ಕದು.

ಅಥವಾ ವಿವಾಹ ರಿಜಿಸ್ಟ್ರಾರನು ಸದರಿ ನೋಟೀಸು ಮತ್ತು ಪ್ರಮಾಣಪತ್ರದ ತಾತ್ಪರ್ಯ ಮತ್ತು ಪರಿಣಾಮದ ಬಗ್ಗೆ ಭಾರತೀಯ ಕ್ರೈಸ್ತನು ತಿಳಿದಿದ್ದಾನೆಯೇ ಎಂಬುದನ್ನು ಅನ್ಯಥಾ ಖಚಿತಪಡಿಸಿಕೊಳ್ಳತಕ್ಕದು.

58. ಭಾರತೀಯ ಕ್ರೈಸ್ತರು ಘೋಷಣೆಗಳನ್ನು ಅರ್ಥಮಾಡಿಕೊಳ್ಳುವಂತೆ ಮಾಡತಕ್ಕದು :—ಈ ಭಾಗದ ಉಪಬಂಧಗಳ ಮೇರೆಗೆ ಯಾವನೇ ಭಾರತೀಯ ಕ್ರೈಸ್ತನು ವಿವಾಹವಾದಾಗ ವಿವಾಹವನ್ನು ವಿಧಿವತ್ತಾಗಿ ನೇರವೇರಿಸುವ ವ್ಯಕ್ತಿಯು ಅಂಥ ಭಾರತಿಯ ಕ್ರೈಸ್ತನು ಇಂಗ್ಲೀಷ್ ಭಾಷೆಯನ್ನು ಅರ್ಥಮಾಡಿಕೊಳ್ಳುತ್ತಾನೆಯೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದು, ಮತ್ತು ಅವನು ಅರ್ಥಮಾಡಿಕೊಳ್ಳದಿದ್ದರೆ, ವಿವಾಹವನ್ನು ಅನುಷ್ಠಾಪಿಸುವ ವ್ಯಕ್ತಿಯು ವಿಧಿವತ್ತಾಗಿ ನೇರವೇರಿಸುವ ಕಾಲದಲ್ಲಿ ಅಂಥ ಭಾರತೀಯ ಕ್ರೈಸ್ತನು ಯಾವ ಭಾಷೆಯನ್ನು ಅರ್ಥಮಾಡಿಕೊಳ್ಳುವನೋ ಆ ಭಾಷೆಗೆ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅಂಥ ವಿವಾಹದಲ್ಲಿ ಮಾಡಿದ ಘೋಷಣೆಗಳನ್ನು ಭಾಷಾಂತರಿಸತಕ್ಕದು. ಅಥವಾ ಭಾಷಾಂತರಿಸುವಂತೆ ಮಾಡತಕ್ಕದು.

59. ಭಾರತೀಯ ಕ್ರೈಸ್ತರ ನಡುವಣ ವಿವಾಹಗಳ ನೋಂದಣಿ :—ಈ ಭಾಗದ ಮೇರೆಗೆ ಭಾರತೀಯ ಕ್ರೈಸ್ತರ ನಡುವಣ ವಿವಾಹಗಳ ನೋಂದಣಿಯನ್ನು 37ನೇ ಪ್ರಕರಣದಲ್ಲಿ ಹೇಳಲಾದ ನಿಯಮಗಳಿಗೆ ಅನುಸಾರವಾಗಿ (ಅವು ಅನ್ವಯವಾಗುವಷ್ಟರ ಮಟ್ಟಿಗೆ) ಮಾಡತಕ್ಕದು ಮತ್ತು ಅನ್ಯಥಾ ಅಲ್ಲ.

## ಭಾಗ VI

## ಭಾರತೀಯ ಕ್ರೈಸ್ತರ ವಿವಾಹ

60. ಭಾರತೀಯ ಕ್ರೈಸ್ತರ ವಿವಾಹಗಳನ್ನು ಯಾವ ಷರತ್ತುಗಳ ಮೇಲೆ ಪ್ರಮಾಣೀಕರಿಸಬಹುದು:

ಪ್ರಮಾಣ ಪತ್ರಕ್ಕಾಗಿ ಅರ್ಜಿಸಲ್ಲಿಸುವ ಭಾರತೀಯ ಕ್ರೈಸ್ತರ ನಡುವಣ ಪ್ರತಿಯೊಂದು ವಿವಾಹವನ್ನು, ಕೆಳಕಂಡ ಷರತ್ತುಗಳನ್ನು ಪೂರೈಸಿದರೆ IIIನೇ ಭಾಗದ ಮೇರೆಗೆ ಅಗ್ಯತಪಡಿಸಿರುವ ಪ್ರಾರಂಭಿಕ ನೋಟಿಸು ಇಲ್ಲದೆ, ಈ ಭಾಗದ ಮೇರೆಗೆ ಪ್ರಮಾಣೀಕರಿಸತಕ್ಕದು ಅನ್ಯಥಾ ಅಲ್ಲ.

(1) ವಿವಾಹವಾಗಲು ಉದ್ದೇಶಿಸಿರುವ ಪುರುಷನ ವಯಸ್ಸು ಇಪ್ಪತ್ತೊಂದು ವರ್ಷಗಳಿಗಿಂತ ಕಡಿಮೆ ಇರತಕ್ಕದಲ್ಲ ಮತ್ತು ವಿವಾಹವಾಗಲು ಉದ್ದೇಶಿಸಿರುವ ಸ್ತ್ರೀಯ ವಯಸ್ಸು ಹದಿನೆಂಟು ವರ್ಷಗಳಿಗಿಂತ ಕಡಿಮೆ ಇರತಕ್ಕದಲ್ಲ,

(2) ವಿವಾಹವಾಗಲು ಉದ್ದೇಶಿಸಿರುವ ವ್ಯಕ್ತಿಗಳಲ್ಲಿ ಯಾರಿಗೂ ಜೀವಂತವಾಗಿರುವ ಹೆಂಡತಿ ಅಥವಾ ಗಂಡ ಇರತಕ್ಕದಲ್ಲ.

(3) 9 ನೇ ಪ್ರಕರಣದ ಮೇರೆಗೆ ಲೈಸನ್ಸು ಪಡೆದಿರುವ ವ್ಯಕ್ತಿಯ ಮತ್ತು ಅಂಥ ವ್ಯಕ್ತಿಯಲ್ಲದೆ ಕಡೆ ಪಕ್ಷ ಇಬ್ಬರು ನಂಬಲರ್ಹ ಸಾಕ್ಷಿದಾರರ ಸಮ್ಮುಖದಲ್ಲಿ ಪ್ರತಿಯೊಬ್ಬ ಪಕ್ಷಕಾರನು ಇನ್ನೊಬ್ಬರಿಗೆ–

'ಕ' 'ಖ' ಆದ ನಾನು ಸರ್ವಶಕ್ತನಾದ ಭಗವಂತನ ಸಮ್ಮುಖದಲ್ಲಿ ಮತ್ತು ನಮ್ಮ ಪ್ರಭುವಾದ ಏಸುಕ್ರಿಸ್ತನ ಹೆಸರಿನಲ್ಲಿ ಗ: ಘ ಆದ ನಿನ್ನನ್ನು ಕಾನೂನುಬದ್ಧ ವಿವಾಹಿತ ಪತ್ನಿ ಅಥವಾ ಪತಿಯನ್ನಾಗಿ ಸ್ವೀಕರಿಸಿದ್ದೇನೆಂಬುದಕ್ಕೆ ಇಲ್ಲಿ ಹಾಜರಿರುವ ಈ ವ್ಯಕ್ತಿಗಳನ್ನು ಸಾಕ್ಷಿಗಳಾಗಿರಲು ಕೋರುತ್ತೇನೆ" ಎಂಬ ಅಥವಾ ಅರ್ಜಿ ಪರಿಣಾಮವುಳ್ಳಂತಹ ಪದಗಳನ್ನು

—ಹೇಳತಕ್ಕದು :

61. ಪ್ರಮಾಣ ಪತ್ರದ ಮಂಜೂರಾತಿ :—ಈ ಭಾಗದ ಮೇರೆಗೆ ಅನುಷ್ಠಾಪಿಸಲಾದ ಯಾವುದೇ ವಿವಾಹದ ಸಂಬಂಧದಲ್ಲಿ, 60 ನೇ ಪ್ರಕರಣದಲ್ಲಿ ನಿಯಮಿಸಲಾದ ಷರತ್ತುಗಳನ್ನು ಪೂರೈಸಲಾಗಿದ್ದಲ್ಲಿ ಯಾವ ವ್ಯಕ್ತಿಯು ಸಮ್ಮುಖದಲ್ಲಿ ಸದರಿ ಘೋಷಣೆಯನ್ನು ಮಾಡಲಾಗಿದೆಯೋ ಅಂಥ ಮೇಲೆ ಹೇಳಿದ ಲೈಸೆನ್ಸನ್ನು ಪಡೆದ ವ್ಯಕ್ತಿಯು ಅಂಥ ವಿವಾಹಕ್ಕೆ ಇಬ್ಬರು ಪಕ್ಷಕಾರರಲ್ಲಿ ಯಾರಾದರೂ ಒಬ್ಬರ ಅರ್ಜಿಯ ಮೇಲೆ ಮತ್ತು ನಾಲ್ಕು ಆಣೆಯ ಫೀಜನ್ನು ಸಂದಾಯ ಮಾಡಿದ ಮೇಲೆ, ವಿವಾಹದ ಪ್ರಮಾಣ ಪತ್ರವನ್ನು ಮಂಜೂರು ಮಾಡತಕ್ಕದು.

ಅಂಥ ಲೈಸೆನ್ಸು ಪಡೆದಿರುವ ವ್ಯಕ್ತಿಯು ಆ ಪ್ರಮಾಣಪತ್ರಕ್ಕೆ ಸಹಿ ಮಾಡತಕ್ಕದು ಮತ್ತು ಅದನ್ನು ಅಂಥ ವಿವಾಹವನ್ನು ನೆರವೇರಿಸಲಾದ ಬಗ್ಗೆ ಅಂಥ ವಿವಾಹದ ಸಿಂಧುತ್ವಕ್ಕೆ ಸಂಬಂಧಪಡುವ ಯಾವುದೇ ದಾವೆಯಲ್ಲಿ ನಿರ್ಣಾಯಕ ರುಜುವಾತಾಗಿ ಸ್ವೀಕರಿಸತಕ್ಕದು.

62. ರಿಜಿಸ್ಟರು ಪುಸ್ತಕವನ್ನು ಮತ್ತು ಅದರ ಉದ್ಧೃತ ಭಾಗಗಳನ್ನು ರಿಜಿಸ್ಟ್ರಾರ್ ಜನರಲ್ಲನಲ್ಲಿ ಠೇವಣಿ ಇಡುವುದು :— 9ನೇ ಪ್ರಕರಣದ ಮೇರೆಗೆ ಲೈಸೆನ್ಸು ಪಡೆದಿರುವ ಪ್ರತಿಯೊಬ್ಬ ವ್ಯಕ್ತಿಯು ಅವನ ತನ್ನ ಸಮ್ಮುಖದಲ್ಲಿ ಈ ಭಾಗದ ಮೇರೆಗೆ ಅನುಷ್ಠಾಪಿಸಿದ ಎಲ್ಲ ವಿವಾಹಗಳ ನೋಂದಣಿ ಪುಸ್ತಕವನ್ನು ಇಂಗ್ಲೀಷಿನಲ್ಲಿ ಅಥವಾ ಯಾವ ಜಿಲ್ಲೆ ಅಥವಾ ರಾಜ್ಯದಲ್ಲಿ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಲಾಯಿತೋ ಆ ಜಿಲ್ಲೆ ಅಥವಾ ರಾಜ್ಯದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವ ದೇಶೀಯ ಭಾಷೆಯಲ್ಲಿ ಮತ್ತು ಅವನು ಯಾವ ರಾಜ್ಯ ಸರ್ಕಾರದಿಂದ ಲೈಸನ್ಸನ್ನು ಪಡೆದಿರುತ್ತಾನೋ ಆ ರಾಜ್ಯ ಸರ್ಕಾರವು ಕಾಲ ಕಾಲಕ್ಕೆ ನಿಯಮಿಸಬಹುದಾದಂಥ ನಮೂನೆಯಲ್ಲಿ, ಇಡತಕ್ಕದು ಮತ್ತು ಸದರಿ ರಾಜ್ಯ ಸರ್ಕಾರದ ಆಡಳಿತಕ್ಕೊಳಪಟ್ಟಿರುವ ರಾಜ್ಯ ಕ್ಷೇತ್ರಗಳ ಜನನ-ಮರಣ ಮತ್ತು ವಿವಾಹಗಳ ರಿಜಿಸ್ಟ್ರಾರ್ ಜನರಲ್ಲನ ಕಚೇರಿಯಲ್ಲಿ ಆ ಸರ್ಕಾರವು ನಿಯಮಿಸಬಹುದಾದಂಥ ನಮೂನೆ ಮತ್ತು ಮಧ್ಯಂತರಗಳಲ್ಲಿ ಅಂಥ ಮಧ್ಯಂತರಗಳ ಕಡೆಯವರಿಂದ ಅದರಲ್ಲಿ ಮಾಡಿದ ಎಲ್ಲ ನಮೂದನೆಗಳನ್ನೊಳಗೊಂಡ ರಿಜಿಸ್ಟರು ಪುಸ್ತಕದಿಂದ ನಿಜವಾದ ಮತ್ತು ಕ್ರಮಬದ್ಧವಾದ ಅಧಿಪ್ರಮಾಣಿಸಿದ ಉದ್ಧೃತ ಭಾಗಗಳನ್ನು ಇಡತಕ್ಕದು.

63. ರಿಜಿಸ್ಟರು ಪುಸ್ತಕದಲ್ಲಿ ಶೋಧನೆ ಮತ್ತು ನಮೂನೆಗಳ ಪ್ರತಿಗಳು ;—ವಿವಾಹದ ಪ್ರಮಾಣ ಪತ್ರಗಳನ್ನು ನೀಡುವುದಕ್ಕೆ ಈ ಅಧಿನಿಯಮದ ಮೇರೆಗೆ ಲೈಸೆನ್ಸು ಪಡೆದಿರುವ ಮತ್ತು 62 ನೇ ಪ್ರಕರಣದ ಮೇರೆಗೆ ವಿವಾಹದ ರಿಜಿಸ್ಟರು ಪುಸ್ತಕವನ್ನು ಇಟ್ಟಿರುವ ಪ್ರತಿಯೊಬ್ಬ ವ್ಯಕ್ತಿಯು ಎಲ್ಲ ಯುಕ್ತ ಕಾಲದಲ್ಲಿ, ಅಂಥ ಪುಸ್ತಕದಲ್ಲಿ ಶೋಧನೆ ಮಾಡಲು ಅವಕಾಶ ಕೊಡತಕ್ಕದು ಮತ್ತು ಸೂಕ್ತ ಫೀಜನ್ನು ಸಂದಾಯ ಮಾಡಿದ ಮೇಲೆ ಅದರಲ್ಲಿನ ಯಾವುದೇ ನಮೂದನೆಯ ಪ್ರತಿಯನ್ನು ಅವನ ಸಹಿಯೊಂದಿಗೆ ಪ್ರಮಾಣೀಕರಿಸಿ ಕೊಡತಕ್ಕದು.

64. Iನೇ ಭಾಗದ ಅಥವಾ III ನೇ ಭಾಗದ ಮೇರೆಗೆ ಭಾರತೀಯ ಕ್ರೈಸ್ತರುಗಳ ವಿವಾಹಗಳನ್ನು ನೋಂದಾಯಿಸುವ ಪುಸ್ತಕಗಳು :—ರಿಜಿಸ್ಟರ್ ಪುಸ್ತಕದ ನಮೂನೆಗೆ ಅದರಲ್ಲಿನ ಉದ್ಧೃತ ಭಾಗಗಳನ್ನು ಇಡುವುದಕ್ಕೆ ಅದರ ಶೋಧನೆಗಳಿಗೆ ಅವಕಾಶ ಕೊಡುವುದಕ್ಕೆ ಮತ್ತು ಅದರಲ್ಲಿನ ನಮೂನೆಗಳ ಪ್ರತಿಗಳನ್ನು ಕೊಡುವುದಕ್ಕೆ ಸಂಬಂಧಿಸಿದಂತೆ, 62 ನೇ ಮತ್ತು 63 ನೇ ಪ್ರಕರಣಗಳ ಉಪಬಂಧಗಳ ಯಥೋಚಿತ ವ್ಯತ್ಯಾಸಗಳೊಂದಿಗೆ 37 ನೇ ಪ್ರಕರಣದ ಮೇರೆಗೆ ಇರುವ ಪುಸ್ತಕಗಳಿಗೆ ಅನ್ವಯಿಸತಕ್ಕದು.

65. ರೋಮನ್ ಕ್ಯಾಥೋಲಿಕರಿಗೆ ಭಾಗ VI ಅನ್ವಯಿಸತಕ್ಕದಲ್ಲ, ಕೆಲವು ವಿವಾಹಗಳ ಉಳಿಸುವಿಕೆ :—

64 ನೇ ಪ್ರಕರಣದಲ್ಲಿ ಉಲ್ಲೇಖಿತವಾಗಿರುವಂತೆ 62 ನೇ ಮತ್ತು 63 ನೇ ಪ್ರಕರಣಗಳಷ್ಟನ್ನು ಮಾತ್ರ ಹೊರತುಪಡಿಸಿ, ಈ ಅಧಿನಿಯಮದ ಈ ಭಾಗವು ರೋಮನ್ ಕ್ಯಾಥೋಲಿಕ್‌ರ ನಡುವಣ ವಿವಾಹಗಳಿಗೆ ಅನ್ವಯಿಸತಕ್ಕದಲ್ಲ. ಆದರೆ ಇದರಲ್ಲಿ ಅಡಕವಾಗಿರುವುದಾವುದೂ 1864 ರ 25 ನೇ ಅಧಿನಿಯಮದ Vನೇ ಭಾಗದ ಉಪಬಂಧಗಳ ಮೇರೆಗೆ 1865 ರ ಫೆಬ್ರುವರಿ ಇಪ್ಪತ್ತ ಮೂರನೆಯ ದಿನಕ್ಕೆ ಮುಂಚೆ ರೋಮನ್ ಕ್ಯಾಥೋಲಿಕ್‌ರ ನಡುವೆ ಆಚರಿಸಲಾದ ಯಾವುದೇ ವಿವಾಹವನ್ನು ಅಸಿಂಧುಗೊಳಿಸತಕ್ಕದಲ್ಲ.

## ಭಾಗ VII

## ದಂಡನೆಗಳು

66. ವಿವಾಹ ನಡೆಸುವುದಕ್ಕಾಗಿ ಸುಳ್ಳು ಪ್ರಮಾಣ ಘೋಷಣೆ, ನೋಟೀಸು ಅಥವಾ ಪ್ರಮಾಣ ಪತ್ರ ;— ವಿವಾಹವನ್ನು ಏರ್ಪಡಿಸುವ ಅಥವಾ ವಿವಾಹದ ಲೈಸನ್ಸನ್ನು ಪಡೆಯುವ ಉದ್ದೇಶಕ್ಕಾಗಿ ಯಾರಾದರೂ ಉದ್ದೇಶಪೂರ್ವಕವಾಗಿ,—

(ಕ) ಈ ಅಧಿನಿಯಮದ ಮೂಲಕ ಅಥವಾ ಯಾವ ಚರ್ಚಿನ ಸಂಸ್ಕಾರಗಳು ಮತ್ತು ಕರ್ಮಾಚರಣೆಗಳಿಗೆ ಅನುಸಾರವಾಗಿ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಲು ಉದ್ದೇಶಿಸಲಾಗಿದೆಯೋ ಆ ಚರ್ಚಿನ, ಅಂಥ ಚರ್ಚು ಇಂಗ್ಲೆಂಡಿನ ಅಥವಾ ಸ್ಕಾಟ್ಲೆಂಡಿನ ಅಥವಾ ರೋಮಿನ ಚರ್ಚಾಗಿದ್ದು ಅದರ ಯಾವುದೇ ನಿಯಮದ ಅಥವಾ ರೂಢಿಯ ಮೂಲಕ ಪ್ರಮಾಣ ವಚನವನ್ನು ಅಥವಾ ಘೋಷಣೆಯನ್ನು ಅಗತ್ಯಪಡಿಸಿರುವಲ್ಲಿ ಸುಳ್ಳು ಪ್ರಮಾಣ ವಚನ ಅಥವಾ ಘೋಷಣೆಯನ್ನು ಮಾಡಿದರೆ; ಅಥವಾ

(ಖ) ಈ ಅಧಿನಿಯಮದ ಮೂಲಕ ನೋಟೀಸು ಅಥವಾ ಪ್ರಮಾಣ ಪತ್ರವನ್ನು ಅಗತ್ಯಪಡಿಸಿರುವಲ್ಲಿ ಸುಳ್ಳು ನೋಟೀಸು ಅಥವಾ ಪ್ರಮಾಣ ಪತ್ರಕ್ಕೆ ರುಜು ಮಾಡಿದರೆ, ಅವನು ಭಾರತ ದಂಡ ಸಂಹಿತೆಯ (1860ರ 45) 193ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡಿದ್ದಾನೆಂದು ಭಾವಿಸತಕ್ಕದು ಹಾಗೂ ಆ ಅಪರಾಧಕ್ಕೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಎರಡರಲ್ಲೊಂದು ಬಗೆಯ ಕಾರವಾಸದಿಂದ ಮತ್ತು ನ್ಯಾಯಾಲಯದ ವಿವೇಚನೆಗನುಸಾರವಾಗಿ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದು,

67. ಮೋಸದ ರೂಪಧಾರಣೆಯ ಮೂಲಕ ವಿವಾಹ ರಿಜಿಸ್ಟ್ರಾರನು ಪ್ರಮಾಣ ಪತ್ರ ಕೊಡುವುದನ್ನು ನಿಷೇಧಿಸುವುದು.—ವಿವಾಹಕ್ಕೆ ಯಾರ ಸಮ್ಮತಿಯನ್ನು ಕಾನೂನಿನ ಮೂಲಕ ಅಗತ್ಯಪಡಿಸಲಾಗಿದೆಯೋ ಆ ವ್ಯಕ್ತಿಯು ತಾನೇ ಎಂಬ ಸುಳ್ಳು ನಿರೂಪಣೆಯ ಮೂಲಕ ಅಂಥ ನಿರೂಪಣೆಯು ಸುಳ್ಳೆಂದು ತಿಳಿದಿದ್ದು ಅಥವಾ ನಂಬಿದ್ದು ಅಥವಾ ಅದು ನಿಜವೆಂದು ನಂಬಲು ಕಾರಣವಿಲ್ಲದೆ ವ್ಯಕ್ತಿಯ ಸಮ್ಮತಿಯ ವಿವಾಹ ರಿಜಿಸ್ಟ್ರಾರನು ಪ್ರಮಾಣ ಪತ್ರ ಕೊಡುವುದನ್ನು ನಿಷೇಧಿಸುವ ಯಾರಾದರೂ ಭಾರತ ದಂಡ ಸಂಹಿತೆಯ (1860 45ರ) 205ನೇ ಪ್ರಕರಣದಲ್ಲಿ ವಿವರಿಸಿರುವ ಅಪರಾಧ ತಪ್ಪಿತಸ್ಥರೆಂದು ಭಾವಿಸತಕ್ಕದು.

68. ಯುಕ್ತ ಅಧಿಕಾರವಿಲ್ಲದೆ ವಿವಾಹವನ್ನು ವಿಧಿವತ್ತಾಗಿ ನೆರವೇರಿಸುವುದು.—ವಿವಾಹಗಳನ್ನು ವಿಧಿವತ್ತಾಗಿ ನೆರವೇರಿಸಲು ಈ ಅಧಿನಿಯಮದ 5ನೇ ಪ್ರಕರಣದ ಮೂಲಕ ಅಧಿಕೃತನಾಗಿಲ್ಲದ ಯಾರಾದರೂ ವಿವಾಹ ನಡೆಯುವ ಜಿಲ್ಲೆಯ ವಿವಾಹ ರಿಜಿಸ್ಟ್ರಾರನ ಗೈರು ಹಾಜರಿಯಲ್ಲಿ ವಿವಾಹವಾಗಲಿರುವವರ ಪೈಕಿ ಒಬ್ಬರು ಕ್ರೈಸ್ತರಾಗಿರುವಲ್ಲಿ ಅಥವಾ ಇಬ್ಬರು ಕ್ರೈಸ್ತರಾಗಿರುವಲ್ಲಿ ಆ ವ್ಯಕ್ತಿಗಳ ನಡುವೆ ವಿವಾಹವನ್ನು ಅನುಷ್ಠಾಪಿಸಿ ನೆರವೇರಿಸಿದರೆ ಅಥವಾ ಅನುಷ್ಠಾಪಿಸಿರುವುದಾಗಿ ಹೇಳಿಕೊಂಡರೆ, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ ಅಥವಾ (ಏಳು ವರ್ಷಗಳು ಅಥವಾ ಅದಕ್ಕೆ ಮೇಲ್ಪಟ್ಟು ಕಾರಾವಾಸದ ಶಿಕ್ಷೆಯ ಬದಲಾಗಿ) ಏಳು ವರ್ಷಗಳಿಗೆ ಕಡಿಮೆ ಇಲ್ಲದ ಮತ್ತು ವರ್ಷಗಳನ್ನು ಮೀರದ ಗಡೀಪಾರಿನಿಂದ ದಂಡಿನಾಗತಕ್ಕದು ಮತ್ತು ಜುಲ್ಮಾನೆಗೆ ಹೊಣೆಯಾಗತಕ್ಕದು,

69. ಯುಕ್ತ ಕಾಲದಲ್ಲಿ ಅಲ್ಲದೆ ಅಥವಾ ಸಾಕ್ಷಿಗಳಿಲ್ಲದೆ ವಿವಾಹವನ್ನು ಅನುಷ್ಠಾಪಿಸುವುದು.—

ವಿವಾಹವಾಗಲಿರುವವರ ಪೈಕಿ ಒಬ್ಬರು ಕ್ರೈಸ್ತನಾಗಿರುವಲ್ಲಿ ಅಥವಾ ಇಬ್ಬರೂ ಕ್ರೈಸ್ತನಾಗಿರುವಲ್ಲಿ ಆ ವ್ಯಕ್ತಿಗಳ ನಡುವೆ, ಬೆಳಿಗ್ಗೆ ಆರು ಮತ್ತು ಸಾಯಂಕಾಲ ಏಳು ಗಂಟೆಗಳ ನಡುವಣ ಕಾಲವನ್ನು ಹೊರತುಪಡಿಸಿ ಇತರ ಯಾವುದೇ ಕಾಲದಲ್ಲಿ ಅಥವಾ ವಿವಾಹವನ್ನು ಅನುಷ್ಠಾಪಿಸುವುದಕ್ಕಾಗಿ ನೆರವೇರಿಸುವ ವ್ಯಕ್ತಿಯನ್ನು ಹೊರತುಪಡಿಸಿ ಕನಿಷ್ಠ ಪಕ್ಷ ಇಬ್ಬರು ನಂಬಲರ್ಹ ಸಾಕ್ಷಿಗಳ ಗೈರುಹಾಜರಿಯಲ್ಲಿ ತಿಳಿದೂ ತಿಳಿದೂ ಮತ್ತು ಉದ್ದೇಶಪೂರ್ವಕವಾಗಿ ವಿವಾಹವನ್ನು ಅನುಷ್ಠಾಪಿಸುವ ಯಾರಾದರೂ ಮೂರು ವರ್ಷಗಳವರೆಗೆ ವಿಸ್ತಸಬಹುದಾದ. ಅವಧಿಯ ಕಾರಾವಾಸದಿಂದ ದಂಡಿತರಾಗತಕ್ಕದು ಮತ್ತು ಜುಲ್ಮಾನೆಗೆ ಸಹಾ ಹೊಣೆಯಾಗತಕ್ಕದು.

ವಿಶೇಷ ಲೈಸೆನ್ಸಿನ ಮೇರೆಗೆ ವಿಧಿವತ್ತಾಗಿ ನೆರವೇರಿಸಿದ ವಿವಾಹಗಳ ಉಳಿಸುವಿಕೆ,—ಬಿಷಪ್ಪಿನ ಆಡಳಿತ ಪ್ರಾಂತದ ಆ್ಯಂಗ್ಲಿಕನ್ ಬಿಷಪ್ಪಿನಿಂದ ಅಥವಾ ಅವನ ಪ್ರತಿನಿಧಿಯಿಂದ ನೀಡಲಾಗಿರುವ ವಿಶೇಷ ಲೈಸೆನ್ಸ್‌ಗಳ ಮೇರೆಗೆ ವಿಧಿವತ್ತಾಗಿ ನೆರವೇರಿಸಲಾದ ವಿವಾಹಗಳಿಗೆ ಅಥವಾ ರೋಮಿನ ಚರ್ಚಿನ ಪಾದ್ರಿಯು 10ನೇ ಪ್ರಕರಣದಲ್ಲಿ ಆ ಬಗ್ಗೆ ನಮೂದಿಸಲಾದ ಸಾಮಾನ್ಯ ಅಥವಾ ವಿಶೇಷ ಲೈಸೆನ್ಸನ್ನು ಸ್ವೀಕರಿಸಿದಾಗ, ಸಾಯಂಕಾಲ ಏಳರಿಂದ ಬೆಳಿಗ್ಗೆ ಆರು ಗಂಟೆಗಳ ನಡುವೆ ಅವನು ನೆರವೇರಿಸಿದ ವಿವಾಹಗಳಿಗೆ ಈ ಪ್ರಕರಣವು ಅನ್ವಯಿಸುವುದಿಲ್ಲ,

ಈ ಪ್ರಕರಣವು ಸ್ಕಾಟಲೆಂಡಿನ ಚರ್ಚಿನ ನಿಯಮಗಳಿಗೆ, ಸಂಸ್ಕಾರಗಳಿಗೆ ಕರ್ಮಾಚರಣೆಗಳಿಗೆ ಮತ್ತು ರೂಢಿಗಳಿಗೆ, ಅನುಸಾರವಾಗಿ ಸ್ಕಾಟಲೆಂಡಿನ ಚರ್ಚಿನ ಪಾದ್ರಿಯಿಂದ ವಿಧಿವತ್ತಾಗಿ ನೆರವೇರಿಸಲಾದ ವಿವಾಹಗಳಿಗೂ ಅನ್ವಯಿಸುವುದಿಲ್ಲ,

70. ಅಪ್ರಾಪ್ತ ವಯಸ್ಕರೊಡನೆ ನೋಟೀಸಿಲ್ಲದೆ ಅಥವಾ ನೋಟೀಸಿನ ನಂತರ ಹದಿನಾಲ್ಕು ದಿನಗಳೊಳಗೆ ವಿವಾಹವನ್ನು ಅನುಷ್ಠಾಪಿಸುವುದು.—ಈ ಅಧಿನಿಯಮದ ಮೇರೆಗೆ ವಿವಾಹಗಳನ್ನು ಅನುಷ್ಠಾಪಿಸಲು ಲೈಸೆನ್ಸ್ ಪಡೆದಿರುವ ಯಾವನೇ ಧರ್ಮಗುರುವು, ಬರಹದಲ್ಲಿ ನೋಟೀಸು ಇಲ್ಲದೆ ಅಥವಾ ವಿವಾಹದ ಪಕ್ಷಕಾರರಲ್ಲಿ ಒಬ್ಬನು ಅಪ್ರಾಪ್ತ ವಯಸ್ಕರಾಗಿರುವಲ್ಲಿ ಮತ್ತು ಅಂಥ ವಿವಾಹಕ್ಕೆ ಅಗತ್ಯಪಡಿಸಿರುವ ತಂದೆತಾಯಿಗಳ ಅಥವಾ ಪಾಲಕರ ಸಮ್ಮತಿಯನ್ನು ಪಡೆಯದಿದ್ದಲ್ಲಿ ಅಂಥ ವಿವಾಹದ ನೋಟೀಸನ್ನು ತಾನು ಸ್ವೀಕರಿಸಿದ ಅನಂತರ ಹದಿನಾಲ್ಕು ದಿನಗಳೊಳಗಾಗಿ ತಿಳಿದೂ ತಿಳಿದೂ ಮತ್ತು ಉದ್ದೇಶಪೂರ್ವಕವಾಗಿ IIIನೇ ಭಾಗದ ಮೇರೆಗೆ ವಿವಾಹವನ್ನು ಅನುಷ್ಠಾಪಿಸಿದಲ್ಲಿ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ ದಂಡಿತನಾಗತಕ್ಕದು ಮತ್ತು ಜುಲ್ಮಾನೆಗೆ ಸಹ ಹೊಣೆಯಾಗತಕ್ಕದು.

71. ನೋಟೀಸನ್ನು ಪ್ರಕಟಪಡಿಸದೆಯೇ ಪ್ರಮಾಣ ಪತ್ರವನ್ನು ಕೊಡುವುದು ಅಥವಾ ವಿವಾಹವಾಗುವುದು.—ಈ ಕೆಳಗಿನ ಯಾವುದೇ ಅಪರಾಧಗಳನ್ನು ಮಾಡುವ ಈ ಅಧಿನಿಯಮದ ಮೇರೆಗಿನ ವಿವಾಹ ರಿಜಿಸ್ಟ್ರಾರನು.—

(1) ಈ ಅಧಿನಿಯಮದ ಮೂಲಕ ನಿರ್ದೇಶಿಸಿದಂತೆ ಅಂಥ ವಿವಾಹದ ನೋಟೀಸನ್ನು ಪ್ರಕಟಪಡಿಸದೆಯೇ, ತಿಳಿದೂ ತಿಳಿದೂ ಮತ್ತು ಉದ್ದೇಶಪೂರ್ವಕವಾಗಿ ವಿವಾಹಕ್ಕಾಗಿ ಯಾವುದೇ ಪ್ರಮಾಣ ಪತ್ರವನ್ನು ಕೊಟ್ಟರೆ ಅಥವಾ ಯಾವುದೇ ವಿವಾಹನ್ನು ಅನುಷ್ಠಾಪಿಸಿದರೆ;

(2) ನೋಟೀಸಿನ ಅವಧಿಯು ಮುಕ್ತಾಯದ ನಂತರ ವಿವಾಹವಾಗುವುದು,—ಯಾವುದೇ ವಿವಾಹದ ಸಂಬಂಧದಲ್ಲಿ 40ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ, ನೋಟೀಸಿನ ಪ್ರತಿಯನ್ನು ನಮೂದಿಸಿದ ಅನಂತರ ಎರಡು ತಿಂಗಳುಗಳ ಅವಧಿಯು ಮುಕ್ತಾಯವಾದ ತರುವಾಯ ಅಂಥ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಿದರೆ,

(3) ನ್ಯಾಯಾಲಯದ ಅಧಿಕಾರವಿಲ್ಲದೆ ಅಥವಾ ನೋಟೀಸ್ ಪ್ರತಿಯನ್ನು ಕಳುಹಿಸದೆ ಹದಿನಾಲ್ಕು ದಿನಗಳೊಳಗಾಗಿ ಅಪ್ರಾಪ್ತ ವಯಸ್ಕನೊಂದಿಗೆ ವಿವಾಹವನ್ನು ಅನುಷ್ಠಾಪಿಸುವುದು.—ಪಕ್ಷಕಾರರಲ್ಲಿ ಒಬ್ಬನು ಅಪ್ರಾಪ್ತ ವಯಸ್ಕನಾಗಿರುವಲ್ಲಿ ಅಂಥ ವಿವಾಹದ ನೋಟೀಸನ್ನು ಸ್ವೀಕರಿಸಿದ ನಂತರ ಹದಿನಾಲ್ಕು ದಿನಗಳು ಮುಕ್ತಾಯವಾಗುವುದಕ್ಕೆ ಮುಂಚೆ ಹಾಗೆ ಮಾಡಲು ಅವನಿಗೆ ಅಧಿಕಾರ ಕೊಡುವ ಸಕ್ಷಮ ನ್ಯಾಯಾಲಯದ ಆದೇಶವಿಲ್ಲದೆ, ಅಥವಾ ಜಿಲ್ಲೆಯಲ್ಲಿ ಒಬ್ಬನಿಗಿಂತ ಹೆಚ್ಚು

ವಿವಾಹ ರಿಜಿಸ್ಟ್ರಾರುಗಳಿದ್ದರೆ, ಮತ್ತು ತಾನೇ ಹಿರಿಯ ವಿವಾಹ ರಿಜಿಸ್ಟ್ರಾರನಾಗಿರದಿದ್ದರೆ ಆ ಜಿಲ್ಲೆಯ ಹಿರಿಯ ವಿವಾಹ ರಿಜಿಸ್ಟ್ರಾರನಿಗೆ ಅಂಥ ನೋಟೀಸಿನ ಪ್ರತಿಯನ್ನು ಅಂಚೆಯ ಮೂಲಕ ಅಥವಾ ಅನ್ಯಥಾ ಕಳುಹಿಸದೆಯೇ ಯಾವುದೇ ವಿವಾಹವನ್ನು ಅನುಷ್ಠಾಪಿಸಿದರೆ,

(4) ಅಧಿಕೃತ ನಿಷೇಧದ ವಿರುದ್ಧ ಪ್ರಮಾಣ ಪತ್ರವನ್ನು ಕೊಡುವುದು.—ಈ ಅಧಿನಿಯಮದಲ್ಲಿ ಉಪಬಂಧಿಸಿದಂತೆ ಪ್ರಮಾಣ ಪತ್ರ ಕೊಡುವುದನ್ನು ನಿಷೇಧಿಸುವುದಕ್ಕೆ ಅಧಿಕೃತನಾಗಿರುವ ಯಾವನೇ ವ್ಯಕ್ತಿಯು ಯಾವ ಪ್ರಮಾಣಪತ್ರ ಕೊಡುವುದನ್ನು ನಿಷೇಧಿಸಿದ್ದಾನೆಯೋ ಆ ಯಾವುದೇ ಪ್ರಮಾಣ ಪತ್ರವನ್ನು ಕೊಟ್ಟರೆ;

ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕುದು ಮತ್ತು ಜುಲ್ಮಾನೆಗೆ ಸಹ ಹೊಣೆಯಾಗತಕ್ಕುದು.

72. ನೋಟೀಸಿನ ಅವಧಿಯ ಮುಕ್ತಾಯವಾದ ನಂತರ ಅಥವಾ ಅಪ್ರಾಪ್ತ ವಯಸ್ಕನ ಸಂಬಂಧದಲ್ಲಿ ನೋಟೀಸಿನ ತರುವಾಯ ಹದಿನಾಲ್ಕು ದಿನಗಳೊಳಗೆ ಅಥವಾ ಅಧಿಕೃತ ನಿಷೇಧದ ವಿರುದ್ಧ ಪ್ರಮಾಣ ಪತ್ರವನ್ನು ಕೊಡುವುದು.—ಯಾವನೇ ವಿವಾಹ ರಿಜಿಸ್ಟ್ರಾರನು ಮೇಲೆ ಹೇಳಿದಂತೆ ಅವನು ನೋಟೀಸನ್ನು ನಮೂದಿಸಿದ ನಂತರ ಎರಡು ತಿಂಗಳುಗಳು ಮುಕ್ತಾಯವಾದ ಮೇಲೆ ತಿಳಿದೂ ತಿಳಿದೂ ಮತ್ತು ಉದ್ದೇಶಪೂರ್ವಕವಾಗಿ ವಿವಾಹಕ್ಕಾಗಿ ಯಾವುದೇ ಪ್ರಮಾಣಪತ್ರವನ್ನು ಕೊಟ್ಟರೆ;

ಅಥವಾ ವಿವಾಹವಾಗಲು ಉದ್ದೇಶಿಸಿರುವ ಪಕ್ಷಕಾರರಲ್ಲಿ ಒಬ್ಬರು, ಅಪ್ರಾಪ್ತ ವಯಸ್ಕನಾಗಿರುವಲ್ಲಿ, ಅಂಥ ನೋಟೀಸನ್ನು ನಮೂದಿಸಿದ ಅನಂತರ ಹದಿನಾಲ್ಕು ದಿನಗಳು ಮುಕ್ತಾಯವಾಗುವುದಕ್ಕೆ ಮುಂಚೆ, ವಿವಾಹಕ್ಕಾಗಿ ಯಾವುದೇ ಪ್ರಮಾಣಪತ್ರವನ್ನು ಅವನನ್ನು ಹಾಗೆ ಮಾಡಲು ಅಧಿಕೃತಗೊಳಿಸುವ ಸಕ್ಷಮ ನ್ಯಾಯಾಲಯದ ಆದೇಶವಿಲ್ಲದಿದ್ದರೆ ಅಥವಾ ಈ ಬಗ್ಗೆ ಅಧಿಕೃತನಾಗಿರುವ ಯಾವನೇ ವ್ಯಕ್ತಿಯಿಂದ ಮೇಲೆ ಹೇಳಿದಂತೆ ಯಾವ ಪ್ರಮಾಣಪತ್ರ ಕೊಡುವುದನ್ನು ನಿಷೇಧಿಸಲಾಗಿದೆಯೋ ಆ ಯಾವುದೇ ಪ್ರಮಾಣಪತ್ರವನ್ನು ತಿಳಿದೂ ತಿಳಿದೂ ಅಥವಾ ಉದ್ದೇಶಪೂರ್ವಕವಾಗಿ ಕೊಟ್ಟರೆ,

ಭಾರತ ದಂಡ ಸಂಹಿತೆಯ (1860 46ರ) 166ನೇ ಪ್ರಕರಣದ ಮೇರೆಗೆ ಅವನು ಅಪರಾಧ ಮಾಡಿರುವನೆಂದು ಭಾವಿಸತಕ್ಕುದು.

73. (ಇಂಗ್ಲೆಂಡಿನ ಸ್ಕಾಟ್‌ಲೆಂಡಿನ ರೋಮಿನ ಚರ್ಚುಗಳ ಪಾದ್ರಿಗಳನ್ನು ಹೊರತುಪಡಿಸಿ) ವಿವಾಹವನ್ನು ಅನುಷ್ಠಾಪಿಸುವುದಕ್ಕೆ ಅಧಿಕೃತರಾದ ವ್ಯಕ್ತಿಗಳು.—

ವಿವಾಹವನ್ನು ಅನುಷ್ಠಾಪಿಸಲು ಅಧಿಕೃತನಾದ, ಮತ್ತು ವಿವಾಹ ನಿಶ್ಚಿತಾರ್ಥ ನೋಟೀಸಿನ ಯುಕ್ತ ಪ್ರಕಟಣೆಯ ತರುವಾಯ ಅಥವಾ ಬಿಷಪ್ಪಿನ ಆಡಳಿತ ಪ್ರಾಂತ್ಯದ ಆ್ಯಂಗ್ಲಿಕನ್ ಬಿಷಪ್‌ನಿಂದ ಅಥವಾ ಆ ಬಗ್ಗೆ ಕ್ರಮಬದ್ಧವಾಗಿ ಅಧಿಕೃತನಾದ ಪ್ರತಿನಿಧಿಯಿಂದ ಪಡೆದ ಲೈಸೆನ್ಸಿನ ಮೇರೆಗೆ ವಿವಾಹವನ್ನು ಅನುಷ್ಠಾಪಿಸುವ ಇಂಗ್ಲೆಂಡಿನ ಚರ್ಚಿನ ಪಾದ್ರಿಯಲ್ಲದ.

ಅಥವಾ ಸ್ಕಾಟ್ಲೆಂಡಿನ ಚರ್ಚಿನ ನಿಯಮಗಳಿಗೆ, ಸಂಸ್ಕಾರಗಳಿಗೆ ಕರ್ಮಾಚರಣೆಗಳಿಗೆ ಮತ್ತು ರೂಢಿಗಳಿಗೆ ಅನುಸಾರವಾಗಿ ವಿವಾಹವನ್ನು ವಿಧಿವತ್ತಾಗಿ ನೆರವೇರಿಸುವ ಆ ಚರ್ಚಿನ ಪಾದ್ರಿಯಾಗಿಲ್ಲದ,

ಅಥವಾ ರೋಮಿನ ಚರ್ಚಿನ ಸಂಸ್ಕಾರಗಳಿಗೆ, ನಿಯಮಗಳಿಗೆ, ಕರ್ಮಾಚರಣೆಗಳಿಗೆ ಮತ್ತು ರೂಢಿಗಳಿಗೆ ಅನುಸಾರವಾಗಿ ವಿವಾಹವನ್ನು ವಿಧಿವತ್ತಾಗಿ ನೆರವೇರಿಸುವ, ಆ ಚರ್ಚಿನ ಪಾದ್ರಿಯಾಗಿಲ್ಲದ,

ಯಾರಾದರೂ—

ನೋಟೀಸನ್ನು ಪ್ರಕಟಪಡಿಸದೆ, ಪ್ರಮಾಣಪತ್ರ ಕೊಡುವುದು ಅಥವಾ ಪ್ರಮಾಣಪತ್ರದ ಅವಧಿಯ ಮುಕ್ತಾಯದ ಅನಂತರ ವಿವಾಹವಾಗುವುದು.—ಈ ಅಧಿನಿಯಮದ ಮೇರೆಗೆ ವಿವಾಹಕ್ಕಾಗಿ ಯಾವುದೇ ಪ್ರಮಾಣಪತ್ರವನ್ನು ತಿಳಿದೂ ತಿಳಿದೂ ಮತ್ತು ಉದ್ದೇಶಪೂರ್ವಕವಾಗಿ ಕೊಡುವುದು ಅಥವಾ ಈ ಅಧಿನಿಯಮದ IIIನೇ ಭಾಗದಲ್ಲಿ ನಿರ್ದೇಶಿಸಿದಂತೆ ಅಂಥ ವಿವಾಹದ ನೋಟೀಸನ್ನು ಪ್ರಕಟಪಡಿಸದೆ ಅಥವಾ ಅಂಟಿಸುವಂತೆ ಮಾಡದೆ ಅಥವಾ ತಾನು ಪ್ರಮಾಣಪತ್ರವನ್ನು ಕೊಟ್ಟ ಮೇಲೆ ಎರಡು ತಿಂಗಳುಗಳು ಮುಕ್ತಾಯವಾದ ನಂತರ ಮೇಲೆ ಹೇಳಿದಂತೆ, ಅಂಥ ವ್ಯಕ್ತಿಗಳ ನಡುವೆ ಯಾವುದೇ ವಿವಾಹವನ್ನು ಅನುಷ್ಠಾಪಿಸಿದರೆ,

ನೋಟೀಸಿನ ತರುವಾಯ ಹದಿನಾಲ್ಕು ದಿನಗಳೊಳಗೆ ಅಪ್ರಾಪ್ತ ವಯಸ್ಕನೊಡನೆ ವಿವಾಹಕ್ಕೆ ಪ್ರಮಾಣಪತ್ರವನ್ನು ಕೊಡುವುದು ಅಥವಾ ವಿವಾಹವನ್ನು ಅನುಷ್ಠಾಪಿಸುವುದು.—ಅಥವಾ ವಿವಾಹವಾಗಲು ಉದ್ದೇಶಿಸಿರುವ ವ್ಯಕ್ತಿಗಳಲ್ಲಿ ಒಬ್ಬರು ಅಪ್ರಾಪ್ತ ವಯಸ್ಕನಾಗಿದ್ದಾಗ,ಅಂಥ ವಿವಾಹದ ನೋಟೀಸನ್ನು ಸ್ವೀಕರಿಸಿದ ನಂತರ ಹದಿನಾಲ್ಕು ದಿವಸಗಳು ಮುಕ್ತಾಯವಾಗುವುದಕ್ಕೆ ಮುಂಚೆ ಅಥವಾ ಅಂಥ ನೋಟೀಸಿನ ಒಂದು ಪ್ರತಿಯನ್ನು ವಿವಾಹ ರಿಜಿಸ್ಟ್ರಾರನಿಗೆ ಅಥವಾ ಒಬ್ಬನಿಗಿಂತ ಹೆಚ್ಚು ವಿವಾಹ ರಿಜಿಸ್ಟ್ರಾರುಗಳಿದ್ದರೆ, ಜಿಲ್ಲೆಯ ಹಿರಿಯ ವಿವಾಹ ರಿಜಿಸ್ಟ್ರಾರನಿಗೆ ಅಂಚೆಯ ಮೂಲಕ ಅಥವಾ ಅನ್ಯಥಾ ಕಳುಹಿಸದೆಯೇ, ತಿಳಿದೂ ತಿಳಿದೂ ಮತ್ತು ಉದ್ದೇಶಪೂರ್ವಕವಾಗಿ ವಿವಾಹಕ್ಕಾಗಿ ಯಾವುದೇ ಪ್ರಮಾಣಪತ್ರವನ್ನು ಕೊಟ್ಟರೆ ಅಥವಾ ಅಂಥ ವ್ಯಕ್ತಿಗಳ ನಡುವೆ ವಿವಾಹವನ್ನು ಅನುಷ್ಠಾಪಿಸಿದರೆ;

ಅಧಿಕೃತವಾಗಿ ನಿಷೇಧಿಸಲಾದ ಪ್ರಮಾಣಪತ್ರವನ್ನು ಕೊಡುವುದು.—ಅಥವಾ ಪ್ರಮಾಣಪತ್ರ ಕೊಡುವುದನ್ನು ನಿಷೇಧಿಸಲು ಅಧಿಕೃತನಾಗಿರುವ ಯಾವನೇ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ನಿಷೇಧಿಸಿರುವ ಆ ಯಾವುದೇ ಪ್ರಮಾಣಪತ್ರವನ್ನು ತಿಳಿದೂ ತಿಳಿದೂ ಮತ್ತು ಉದ್ದೇಶಪೂರ್ವಕವಾಗಿ ಕೊಟ್ಟರೆ;

ಅಧಿಕೃತವಾಗಿ ನಿಷೇಧಿಸಲಾದ ವಿವಾಹವನ್ನು ಅನುಷ್ಠಾಪಿಸುವುದು.—ಅಥವಾ ವಿವಾಹವನ್ನು ನಿಷೇಧಿಸಲು ಅಧಿಕೃತನಾಗಿರುವ ಯಾವನೇ ವ್ಯಕ್ತಿಯು ನಿಷೇಧಿಸಿದ ಯಾವುದೇ ವಿವಾಹವನ್ನು ತಿಳಿದೂ ಮತ್ತು ಉದ್ದೇಶಪೂರ್ವಕವಾಗಿ ವಿಧಿವತ್ತಾಗಿ ನೆರವೇರಿಸಿದರೆ, ಅವನು ನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕುದು ಮತ್ತು ಜುಲ್ಮಾನೆಗೂ ಸಹಾ ಹೊಣೆಯಾಗತಕ್ಕುದು.

ಮತ್ತು ಈ ಅಧಿನಿಯಮದ ಮೇರೆಗೆ, ವಿವಾಹಗಳ ಯಾವುದೇ ರಿಜಿಸ್ಟರು ಅಥವಾ ಯಾವುದೇ ಪ್ರಮಾಣಪತ್ರ ಅಥವಾ ದ್ವಿಪ್ರತಿ ಅಥವಾ ಪ್ರಮಾಣಪತ್ರಗಳ ಪ್ರತಿಗಳನ್ನು ತತ್ಕಾಲದಲ್ಲಿ ತನ್ನ ಅಭಿರಕ್ಷೆಯಲ್ಲಿ ಇಟ್ಟುಕೊಂಡಿರುವ ಪ್ರತಿಯೊಬ್ಬ ವಿವಾಹ ರಿಜಿಸ್ಟ್ರಾರನು ಅಥವಾ ಪ್ರಮಾಣಪತ್ರಗಳನ್ನು ತತ್ಕಾಲದಲ್ಲ ತನ್ನ ಅಭಿರಕ್ಷೆಯಲ್ಲಿ ಇಟ್ಟುಕೊಂಡಿರುವ ಪ್ರತಿಯೊಬ್ಬ ವಿವಾಹ ರಿಜಿಸ್ಟ್ರಾರನು ಅಥವಾ ಜನನ, ಮರಣ ಮತ್ತು ವಿವಾಹಗಳ ರಿಜಿಸ್ಟ್ರಾರ್ ಜನರಲ್ಲನು,

ಸೂಕ್ತ ಫೀಜನ್ನು ಸಂದಾಯ ಮಾಡಿದ ಮೇಲೆ ಎಲ್ಲ ಯುಕ್ತ ಕಾಲಗಳಲ್ಲಿ ಅಂಥ ರಿಜಿಸ್ಟರಿನಲ್ಲಿ ಅಥವಾ ಅಂಥ ಪ್ರಮಾಣಪತ್ರಕ್ಕಾಗಿ ಅಥವಾ ದ್ವಿಪ್ರತಿ ಅಥವಾ ಪ್ರತಿಗಳಿಗಾಗಿ ಶೋಧನೆ ಮಾಡುವುದಕ್ಕೆ ಅವಕಾಶ ಕೊಡತಕ್ಕದು ಮತ್ತು ಅವುಗಳಲ್ಲಿನ ಯಾವುದೇ ನಮೂದನೆಯ ಪ್ರತಿಯನ್ನು ತನ್ನ ಸಹಿಯೊಡನೆ ಕೊಡತಕ್ಕದು.

80. ವಿವಾಹ ರಿಜಿಸ್ಟರಿನಲ್ಲಿ ನಮೂದನೆಯ ಪ್ರಮಾಣಿತ ಪ್ರತಿ ಇತ್ಯಾದಿಯು ಸಾಕ್ಷ್ಯವಾಗಿರತಕ್ಕದು.— ಈ ಅಧಿನಿಯಮದ ಮೇರೆಗೆ ಇಡಬೇಕಾಗಿ ಅಥವಾ ಕೊಡಬೇಕಾಗಿ ಅಗತ್ಯಪಡಿಸಲಾದ ಯಾವುದೇ ವಿವಾಹ ರಿಜಿಸ್ಟರು, ಅಥವಾ ಪ್ರಮಾಣಪತ್ರ ಅಥವಾ ದ್ವಿಪ್ರತಿಯ ಅಭಿರಕ್ಷೆಯನ್ನು ಈ ಅಧಿನಿಯಮದ ಮೇರೆಗೆ ವಹಿಸಿಕೊಡಲಾದ ವ್ಯಕ್ತಿಯಿಂದ ಸಹಿಮಾಡಲಾಗಿದೆ ಎಂದು ತಾತ್ಪರ್ಯವಾಗುತ್ತಿದ್ದ ಅಂಥ ರಿಜಿಸ್ಟರಿನಲ್ಲಿನ ವಿವಾಹದ ಯಾವುದೇ ನಮೂದನೆಯ ಅಥವಾ ಅಂಥ ಯಾವುದೇ ಪ್ರಮಾಣಪತ್ರದ ಅಥವಾ ದ್ವಿಪ್ರತಿಯಲ್ಲಿನ ಪ್ರತಿಯೊಂದು ಪ್ರಮಾಣಿತ ಪ್ರತಿಯನ್ನು ವಿವಾಹವನ್ನು ಹಾಗೆ ನಮೂದಿಸಲಾಗಿದೆಯೆಂದು ತಾತ್ಪರ್ಯವಾಗುವ ಅಥವಾ ಅದರಲ್ಲಿ ಹಾಗೆ ಪ್ರಮಾಣಿತವಾಗಿದೆಯೆಂದು ತಾತ್ಪರ್ಯವಾಗುವ ಸಂಗತಿಗಳ ಸಾಕ್ಷ್ಯವೆಂದು ಅನುಕ್ರಮವಾಗಿ ಅಂಥ ರಿಜಿಸ್ಟರು, ಅಥವಾ ಪ್ರಮಾಣ ಪತ್ರ ಅಥವಾ ದ್ವಿಪ್ರತಿ ಅಥವಾ ಅದರಲ್ಲಿನ ಯಾವುದೇ ನಮೂದನೆಯ ಅಥವಾ ಅಂಥ ಪ್ರತಿಯ ಮತ್ತಷ್ಟು ರುಜುವಾತಿಲ್ಲದೆ: ಸಾಕ್ಷ್ಯವೆಂದು ಸ್ವೀಕರಿಸತಕ್ಕದು.

81. ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕಾದ ಕೆಲವೊಂದು ವಿವಾಹಗಳ ಪ್ರಮಾಣಪತ್ರಗಳು.—ಜನನ, ಮರಣ ಮತ್ತು ವಿವಾಹಗಳ ರಿಜಿಸ್ಟ್ರಾರ್ ಜನರಲ್ಲನು ಪ್ರತಿವರ್ಷ ಪ್ರತಿ ತ್ರೈಮಾಸಿಕದ ಕೊನೆಯಲ್ಲಿ ಅಂಥ ತ್ರೈಮಾಸಿಕ ಅವಧಿಯಲ್ಲಿ ತನಗೆ ಕಳುಹಿಸಿದ ವಿವಾಹಗಳ ಪ್ರಮಾಣಪತ್ರಗಳಿಂದ ಯಾವ ವಿವಾಹಗಳ ಸಾಕ್ಷ್ಯವನ್ನು ಅವನನ್ನು ನೇಮಿಸಿದ ಸರ್ಕಾರವು ಇಂಗ್ಲೆಂಡಿಗೆ ರವಾನಿಸತಕ್ಕದೆಂದು ಅಪೇಕ್ಷಿಸಬಹುದೊ ಆ ವಿವಾಹಗಳ ಪ್ರಮಾಣ ಪತ್ರಗಳನ್ನು ಆರಿಸತಕ್ಕದು ಮತ್ತು ಅದೇ ಪ್ರಮಾಣಪತ್ರಗಳನ್ನು ತಾನು ಸಹಿ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದು,

82. ರಾಜ್ಯ ಸರ್ಕಾರವು ಫೀಜುಗಳನ್ನು ನಿಯಮಿಸತಕ್ಕದು.—ವಿವಾಹಗಳ ನೋಟೀಸುಗಳನ್ನು ಸ್ವೀಕರಿಸುವುದಕ್ಕಾಗಿ ಮತ್ತು ಪ್ರಕಟಪಡಿಸುವುದಕ್ಕಾಗಿ ವಿವಾಹ ರಿಜಿಸ್ಟ್ರಾರರುಗಳು ವಿವಾಹದ ಪ್ರಮಾಣಪತ್ರಗಳನ್ನು ಕೊಡುವುದಕ್ಕಾಗಿ ಮತ್ತು ಅವರೇ ವಿವಾಹಗಳನ್ನು ನೋಂದಾಯಿಸುವುದಕ್ಕಾಗಿ :

ಸದರಿ ರಿಜಿಸ್ಟ್ರಾರರುಗಳಿಂದ ವಿವಾಹಕ್ಕಾಗಿ ಪ್ರಮಾಣಪತ್ರಗಳನ್ನು ಕೊಡುವುದರ ವಿರುದ್ಧ ಪ್ರತಿಭಟನೆಯನ್ನು ನಮೂದಿಸುವುದಕ್ಕಾಗಿ ಅಥವಾ ನಿಷೇಧಿಸುವುದಕ್ಕಾಗಿ, ರಿಜಿಸ್ಟರು ಪುಸ್ತಕಗಳ ಅಥವಾ ಪ್ರಮಾಣಪತ್ರಗಳ ಅಥವಾ ದ್ವಿಪ್ರತಿಗಳ ಅಥವಾ ಅವುಗಳ ಪ್ರತಿಗಳ ಶೋಧನೆಗಾಗಿ 63ನೇ ಮತ್ತು 79ನೇ ಪ್ರಕರಣಗಳ ಮೇರೆಗೆ ಅದರ ನಮೂದನೆಗಳ ಪ್ರತಿಗಳನ್ನು ಕೊಡುವುದಕ್ಕಾಗಿ ಈ ಅಧಿನಿಯಮದ ಮೇರೆಗೆ ಫೀಜುಗಳನ್ನು ವಿಧಿಸತಕ್ಕದು.

ರಾಜ್ಯ ಸರ್ಕಾರವು ಅನುಕ್ರಮವಾಗಿ ಅಂಥ ಫೀಜುಗಳ ಮೊಬಲಗನ್ನು ಗೊತ್ತುಪಡಿಸತಕ್ಕದು ; ಮತ್ತು ತನಗೆ ಯೋಗ್ಯವೆಂದು ಕಂಡು ಬರಬಹುದಾದಂತೆ, ಸಾಮಾನ್ಯವಾಗಿಯಾಗಲಿ ಅಥವಾ ವಿಶೇಷ ಸಂದರ್ಭಗಳಲ್ಲಾಗಲಿ ಇವುಗಳನ್ನು ಕಾಲಕಾಲಕ್ಕೆ ವ್ಯತ್ಯಸ್ತಗೊಳಿಸಬಹುದು ಅಥವಾ ಮಾಫಿ ಮಾಡಬಹುದು.

83. ನಿಯಮ ರಚನಾಧಿಕಾರ.—(1) ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ, ಮೂಲಕ 82ನೇ ಪ್ರಕರಣದಲ್ಲಿ ಹೇಳಿದ ಫೀಜುಗಳ ವಿಲೆ. ರಿಜಿಸ್ಟರು ಪುಸ್ತಕಗಳ ಸರಬರಾಜನ್ನು ಮತ್ತು ಈ ಅಧಿನಿಯಮದ ಮೇರೆಗೆ ಅನುಷ್ಠಾಪಿಸಲಾದ ವಿವಾಹಗಳ ವಿವರಪಟ್ಟಿಕೆಗಳ ತಯಾರಿಕೆ ಮತ್ತು ಒಪ್ಪಿಸುವಿಕೆಯ ಸಂಬಂಧವಾಗ ನಿಯಮಗಳನ್ನು ರಚಿಸಬಹುದು.

(2) ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ಮೇಲೆ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಮುಂದೆ ಇಡತಕ್ಕದು.

84. (ಭಾರತೀಯ ರಾಜ್ಯಗಳಿಗಾಗಿ ಫೀಜುಗಳನ್ನು ಮತ್ತು ನಿಯಮಗಳನ್ನು ನಿಯಮಿಸುವ ಅಧಿಕಾರ).— ಎ. ಒ. 1950ರ ಮೂಲಕ ನಿರಸಿತವಾಗಿದೆ.

85. ಯಾರು ಜಿಲ್ಲಾ ನ್ಯಾಯಾಧೀಶನಾಗಿರಬೇಕೆಂಬುದನ್ನು ಘೋಷಿಸುವ ಅಧಿಕಾರ.—ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮವು ಯಾವ ಸ್ಥಳಕ್ಕೆ ಅನ್ವಯಿಸುವುದೋ ಆ ಯಾವುದೇ ಸ್ಥಳದಲ್ಲಿ ಯಾರನ್ನು ಜಿಲ್ಲಾ ನ್ಯಾಯಾಧೀಶರೆಂದು ಭಾವಿಸತಕ್ಕದೆಂಬುದನ್ನು ಘೋಷಿಸತಕ್ಕದು.

86. (ಭಾರತೀಯ ರಾಜ್ಯಗಳ ಸಂಬಂಧವಾಗಿ ಚಲಾಯಿಸಬಹುದಾದ ಅಧಿಕಾರಿಗಳು ಮತ್ತು ಪ್ರಕಾರ್ಯಗಳು) ಎ. ಒ. 1950ರ ಮೂಲಕ ನಿರಸಿತವಾಗಿದೆ.

87. ಕಾನ್ಸಲರ್ ವಿವಾಹಗಳ ಉಳಿಸುವಿಕೆ.—ಈ ಅಧಿನಿಯಮದಲ್ಲಿರುವುದಾವುದೂ ಯಾವನೇ ಗುರುವಿನಿಂದ ಕಾನ್ಸಲ್ಲನಿಂದ ಅಥವಾ ಕಾನ್ಸಲರ್ ಏಜೆಂಟನಿಂದ ತಾನು ಪ್ರತಿನಿಧಿಸುವ ರಾಜ್ಯದ ಪ್ರಜೆಗಳ ನಡುವೆ ಮತ್ತು ಅಂಥ ರಾಜ್ಯದ ಕಾನೂನುಗಳಿಗೆ ಅನುಸಾರವಾಗಿ ನೆರವೇರಿಸಲಾಗುವ ಯಾವುದೇ ವಿವಾಹಕ್ಕೆ ಅನ್ವಯಿಸತಕ್ಕದಲ್ಲ.

88. ನಿಷೇಧಿತ ಶ್ರೇಣಿಗಳೊಳಗಿನ ವಿವಾಹಗಳ ಅಸಿಂಧುಗೊಳಿಸುವಿಕೆ.—ಇಬ್ಬರು ಪಕ್ಷಕಾರರಲ್ಲಿ ಯಾರಾದರೂ ಒಬ್ಬ ಪಕ್ಷಕಾರನಿಗೆ ಅನ್ವಯಿಸುವ ವೈಯಕ್ತಿಕ ಕಾನೂನು ಯಾವ ವಿವಾಹವನ್ನು ಅವನು ಅಥವಾ ಅವಳು ಮಾಡಿಕೊಳ್ಳುವುದನ್ನು ನಿಷೇಧಿಸುವುದೋ ಆ ಯಾವುದೇ ವಿವಾಹವನ್ನು ಈ ಅಧಿನಿಯಮದಲ್ಲಿನುವುದಾದರೂ ಸಿಂಧುಗೊಳಿಸುತ್ತದೆಂದು ಭಾವಿಸತಕ್ಕದಲ್ಲ.

(ಅನಂಸೂಚಿ–I)

ಅನಂಸೂಚಿ–I

(12ನೇ ಮಂತ್ತು 38ನೇ ಪ್ರಕರಣಗಳನ್ನು ನೋಡಿ)

## ವಿವಾಹದ ನೋಟೀಸಂ

............................ನ ಧರ್ಮಗುರು (ಅಥವಾ ರಿಜಿಸ್ಟ್ರಾರ್)..............................ನಿಗೆ. ನನ್ನ ಮಂತ್ತು ಇದರಲ್ಲಿ ಹೆಸರಿಸಲಾದ ಮಂತ್ತು ವಿವರಿಸಲಾದ ನನ್ನ ಮಂತ್ತು ಇತರ ಪಕ್ಷಕಾರರ ನಡುವೆ ಈ ದಿನಾಂಕದಿಂದ ಮೂರು ಕ್ಯಾಲೆಂಡರ್ ತಿಂಗಳಂಗಳೊಳಗೆ ವಿವಾಹವನ್ನು ನಡೆಸಬೇಕೆಂದು ಉದ್ದೇಶಿಸಲಾಗಿದೆಯೆಂದು ನಾನಂ ಈ ಮಂೂಲಕ ನಿಮಂಗೆ ನೋಟೀಸಂ ಕೊಡಂತ್ತಿದ್ದೇನೆ. (ಎಂದರೆ).—

| ಹೆಸರುಗಳು | ಸ್ಥಿತಿ | ದರ್ಜೆ ಮಂತ್ತು ವೃತ್ತಿ | ವಯಂಸ್ಸು | ವಾಸಸ್ಥಳ | ವಾಸಿಸಿದ ಕಾಲ | ವಿವಾಹವನ್ನು ವಿಧಿವತ್ತಾಗಿ ನೆರವೇರಿಸಬೇಕಾದ ಚರ್ಚು ಚಿಕ್ಕದೇವಾಲಯಂ ಅಥವಾ ಪೂಜಾ ಸ್ಥಳ | ಪಕ್ಷಕಾರರು ಬೇರೆ ಬೇರೆ ಜಿಲ್ಲೆಗಳಲ್ಲಿ ವಾಸಿಸುತ್ತಿರುವಾಗ, ಇನ್ನೊಬ್ಬ ಪಕ್ಷಕಾರನಂ ವಾಸಿಸುತ್ತಿರಂವ ಜಿಲ್ಲೆ. |
|---|---|---|---|---|---|---|---|
| ಜೇಮಂ್ಸ್ ಸ್ಮಿತ್ | ವಿಧುರ | ಬಡಗಿ | ಪ್ರಾಪ್ತ ವಯಂಸ್ಕ | ೧೩, ಕ್ಲೈವ್ ಬೀದಿ | ೨೩ ದಿವಸಗಳು | ಕಲ್ಕತ್ತೆಯ ಸ್ಕಾಟ್‌ಲೆಂಡ್ ಚರ್ಚಿನ ಫ್ರೀ ಚರ್ಚ್ | |
| ಮಾರ್ಥಾ ಗ್ರೀನ್ | ಅವಿವಾಹಿತೆ | ...... | ಅಪ್ರಾಪ್ತ ವಯಂಸ್ಕಳು | ೨೦, ಹೇಸ್ಟಿಂಗ್ ಬೀದಿ | ಒಂದು ತಿಂಗಳಿಗಿಂತ ಹೆಚ್ಚಾಗಿ | | |

.......................ಎಪ್ಪತ್ತೆರಡರ........................ನೆಯ.....................ದಿನದಂದು ನನ್ನ ಸಾಕ್ಷಿ ರಂಜು.

(ಸಹಿ ಮಾಡಲಾಗಿದೆ) ಜೇಮಂ್ಸ್ ಸ್ಮಿತ್.

(ಸಂದರ್ಭಾನಂಸಾರ, ಈ ಅನಂಸೂಚಿಯಂಲ್ಲಿ ಓರೆ ಮಂದ್ರಣಾಕ್ಷರಗಳಿಂದ ಅಂಕಣಗಳನ್ನು ಭರ್ತಿ ಮಾಡಬೇಕು ಮಂತ್ತು ಅದರ ಖಾಲಿ ಅಂಕಣವನ್ನು ಪಕ್ಷಕಾರರಲ್ಲಿ ಒಬ್ಬರು ಬೇರೆ ಜಿಲ್ಲೆಯಲ್ಲಿ ವಾಸಿಸಂತ್ತಿದ್ದಾಗ ಮಾತ್ರ ಭರ್ತಿ ಮಾಡಬೇಕಂ.)

## ಅನುಸೂಚಿ–II

(24ನೇ ಮತ್ತು 50ನೇ ಪ್ರಕರಣಗಳನ್ನು ನೋಡಿ)

### ನೋಟೀಸನ್ನು ಸ್ವೀಕರಿಸಿದ ಬಗ್ಗೆ ಪ್ರಮಾಣ ಪತ್ರ

.................................ನಾನು..........................ದಿನದಂದು ನನ್ನಲ್ಲಿರುವ ವಿವಾಹ ನೋಟೀಸು ಪುಸ್ತಕದಲ್ಲಿ ಅದರಲ್ಲಿ ಹೆಸರಿಸಿದ ಮತ್ತು ವಿವರಿಸಿದ, ಪಕ್ಷಕಾರರಲ್ಲಿ ಒಬ್ಬನಾದ..........................ನ ಸಹಿಯೊಂದಿಗೆ ಕೊಡಲಾದ ಪಕ್ಷಕಾರರ ನಡುವೆ ಎಂದರೆ.—

| ಹೆಸರುಗಳು | ಸ್ಥಿತಿ | ದರ್ಜೆ ಅಥವಾ ವೃತ್ತಿ | ವಯಸ್ಸು | ವಾಸಸ್ಥಳ | ವಾಸಿಸಿದ ಕಾಲ | ವಿಧಿವತ್ತಾಗಿ ನೆರವೇರಿಸಬೇಕಾದ ಚರ್ಚ್, ಚಿಕ್ಕದೇವಾಲಯ ಅಥವಾ ಪೂಜಾ ಸ್ಥಳ | ಪಕ್ಷಕಾರರು ಬೇರೆ ಬೇರೆ ಜಿಲ್ಲೆಗಳಲ್ಲಿ ವಾಸಿಸುತ್ತಿರುವಾಗ, ಇನ್ನೊಬ್ಬ ಪಕ್ಷಕಾರನು ವಾಸಿಸುತ್ತಿರುವ ಜಿಲ್ಲೆ. |
|---|---|---|---|---|---|---|---|
| ಜೇವ್ಸ್‌ಸ್ಮಿತ್ | ವಿದುರ | ಬಡಗಿ | ಪ್ರಾಪ್ತ ವಯಸ್ಕ | ೧೬, ಕ್ಲೈವ್ ಬೀದಿ | ೨೩ ದಿನಗಳು | ಕಲ್ಕತ್ತೆಯ ಸ್ಕಾಟ್‌ಲೆಂಡ್ ಚರ್ಚ್‌ನ ಫ್ರೀ ಚರ್ಚ್ | |
| ಮಾರ್ಥಾಗ್ರೀನ್ | ಅವಿವಾಹಿತೆ | ...... | ಅಪ್ರಾಪ್ತ ವಯಸ್ಕಳು | ೨೦, ಹೇಸ್ಟಿಂಗ್ಸ್ ಬೀದಿ | ಒಂದು ತಿಂಗಳಿಗಿಂತ ಹೆಚ್ಚು | | |

ಉದ್ದೇಶಿತ ವಿವಾಹದ ನೋಟೀಸನ್ನು ಕ್ರಮಬದ್ಧವಾಗಿ ನಮೂದಿಸಲಾಯಿತು ಎಂದು ಮತ್ತು ಭಾರತೀಯ ಕ್ರೈಸ್ತರ ವಿವಾಹ ಅಧಿನಿಯಮ, 1872 (1872ರ 15)ರ 17 ಅಥವಾ 41ನೇ ಪ್ರಕರಣಗಳ ಮೂಲಕ ಅಗತ್ಯಪಡಿಸಿದ ಘೋಷಣೆ ಅಥವಾ ಪ್ರಮಾಣ ವಚನವನ್ನು ಸದರಿ———(ಜೇವ್ಸ್‌ಸ್ಮಿತ್) ವ್ಯಕ್ತಿಯಿಂದ ಕ್ರಮಬದ್ಧವಾಗಿ ಮಾಡಲಾಗಿದೆಯೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

| | |
|---|---|
| ನೋಟೀಸನ್ನು ನಮೂದಿಸಿದ ದಿನಾಂಕ<br>ಪ್ರಮಾಣಪತ್ರವನ್ನು ಕೊಟ್ಟ ದಿನಾಂಕ | ಈ ಪ್ರಮಾಣಪತ್ರ ಕೊಡುವುದನ್ನು ನಿಷೇಧಿಸಲು ಯಾವನೇ ವ್ಯಕ್ತಿಯು ಅದನ್ನು ಕೊಡುವುದನ್ನು ನಿಷೇಧಿಸಿರುವುದಿಲ್ಲ. |

ಎಪ್ಪತ್ತೆರಡರ......................ನೆಯ......................ದಿನದಂದು ನನ್ನ ರುಜುಸಾಕ್ಷಿ

(ಸಹಿ ಮಾಡಲಾಗಿದೆ)

......................ರ..................ನೇ ದಿನದಂದು ಅಥವಾ ಅದಕ್ಕೆ ಮೊದಲು ವಿವಾಹವನ್ನು ವಿಧಿವತ್ತಾಗಿ ಅನುಷ್ಠಾಪಿಸದಿದ್ದರೆ, ಈ ಪ್ರಮಾಣಪತ್ರವು ಶೂನ್ಯವಾಗುವುದು.

(ಸಂದರ್ಭಾನುಸಾರ ಈ ಅನುಸೂಚಿಯಲ್ಲಿ ಓರೆ ಮುದ್ರಣಾಕ್ಷರಗಳಿರುವ ಅಂಕಣಗಳನ್ನು ಭರ್ತಿ ಮಾಡಬೇಕು ಮತ್ತು ಅದರ ಖಾಲಿ ಅಂಕಣದನ್ನು ಪಕ್ಷಕಾರರಲ್ಲಿ ಒಬ್ಬರು ಬೇರೆ ಜಿಲ್ಲೆಯಲ್ಲಿ ವಾಸಿಸುತ್ತಿದ್ದಾಗ ಮಾತ್ರ ಭರ್ತಿ ಮಾಡಬೇಕು.

## ಅನುಸೂಚಿ–III

(28ನೇ ಮತ್ತು 31ನೇ ಪ್ರಕರಣಗಳನ್ನು ನೋಡಿ)

### ವಿವಾಹಗಳ ರಿಜಿಸ್ಟರಿನ ನಮೂನೆ

| | |
|---|---|
| ಕಲ್ಕತ್ತ<br>ಮದ್ರಾಸು<br>ಮುಂಬಯಿ | ..................ಆರ್ಚ್‌ಡಿಕೊನರಿಗಾಗಿ ವಿವಾಹಗಳ ತ್ರೈಮಾಸಿಕ ವಿವರ ಪಟ್ಟಿಕೆಗಳು |
| ಕಲ್ಕತ್ತ<br>ಮದ್ರಾಸು<br>ಮುಂಬಯಿ | ಯ ಆರ್ಚ್‌ಡಿಕೊನರಿಯ ರಿಜಿಸ್ಟ್ರಾರನಾದ......................ನಾನು ಇದಕ್ಕೆ ಅನುಬಂಧಿತವಾದವುಗಳು **ವರ್ಷದ**............ನೇ ದಿನದಂದು............ಪ್ರಾರಂಭವಾಗಿ............ದಿನಕ್ಕೆ ಮುಕ್ತಾಯವಾಗುವ ತ್ರೈಮಾಸಿಕಕ್ಕೆ ಸಂಬಂಧಿಸಿದಂತೆ ಕಲ್ಕತ್ತಾ, ಮದ್ರಾಸು, ಮುಂಬಯಿಯ ಆರ್ಚ್‌ಡಿಕೊನರಿಯಲ್ಲಿನ ವಿವಾಹದ ಅಧಿಕೃತ ತ್ರೈಮಾಸಿಕ ವಿವರ ಪಟ್ಟಿಕೆಗಳ ಮೂಲ ಪ್ರತಿಗಳಿಂದ ನೋಡಿದ ಮತ್ತು ನನಗೆ ರವಾನಿಸಿರುವಂಥ ಸರಿಯಾದ ನಕಲುಗಳೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ. |

(ರಿಜಿಸ್ಟ್ರಾರನ ಸಹಿ)

| | |
|---|---|
| ಕಲ್ಕತ್ತ<br>ಮದ್ರಾಸು<br>ಮುಂಬಯಿ | ಯ ಆರ್ಚ್‌ಡಿಕೊನರಿಯ ರಿಜಿಸ್ಟ್ರಾರನು |
| ಅಲಹಾಬಾದ್<br>ಬ್ಯಾರಕ್‌ಪುರ<br>ಬರೇಲಿ<br>ಕಲ್ಕತ್ತಾ | ಇತ್ಯಾದಿ, ಇತ್ಯಾದಿ ಸ್ಥಳಗಳಲ್ಲಿ ಅನುಷ್ಠಾಪಿಸಲಾದ ವಿವಾಹಗಳು |

| ಯಾವಾಗ ವಿವಾಹವಾದುದು | | | ಪಕ್ಷಕಾರರ ಹೆಸರುಗಳು | | | | | | | | | | | |
|---|---|---|---|---|---|---|---|---|---|---|---|---|---|---|
| ವರ್ಷ | ತಿಂಗಳು | ದಿನ | ಕ್ರೈಸ್ತ | ಉಪನಾಮ | ವಯಸ್ಸು | ಸ್ಥಿತಿ | ದರ್ಜೆ ಅಥವಾ ವೃತ್ತಿ | ವಿವಾಹ ಕಾಲದಲ್ಲಿ ವಾಸ ಸ್ಥಳ | ತಂದೆಯ ಹೆಸರು ಮತ್ತು ಉಪನಾಮ | ವಿವಾಹ ನಿಶ್ಚಿತಾರ್ಥ ನೋಟಿಸು ಅಥವಾ ಲೈಸನ್ಸಿನ ಮೂಲಕ | ಪಕ್ಷಕಾರರ ರುಜುಗಳು | ಹಾಜರಿರುವ ಇಬ್ಬರು ಅಥವಾ ಹೆಚ್ಚಿನ ಸಾಕ್ಷಿದಾರರ ರುಜುಗಳು | ವಿವಾಹವನ್ನು ವಿಧಿವತ್ತಾಗಿ ನೆರವೇರಿಸುವ ವ್ಯಕ್ತಿಯ ರುಜು |
| | | | | | | | | | | | | | |

## ಅನುಸೂಚಿ-IV

(32ನೇ ಮತ್ತು 54ನೇ ಪ್ರಕರಣಗಳನ್ನು ನೋಡಿ

### ವಿವಾಹ ರಿಜಿಸ್ಟರು ಪುಸ್ತಕ

| ಸಂಖ್ಯೆ | ಯಾವಾಗ ವಿವಾಹವಾದುದು | | | ಪಕ್ಷಕಾರರ ಹೆಸರುಗಳು | | ವಯಸ್ಸು | ಸ್ಥಿತಿ | ದರ್ಜೆ ಅಥವಾ ವೃತ್ತಿ | ವಿವಾಹದ ಕಾಲದಲ್ಲಿನ ವಾಸ ಸ್ಥಳ | ತಂದೆಯ ಹೆಸರು ಮತ್ತು ಅಡ್ಡ ಹೆಸರು |
|---|---|---|---|---|---|---|---|---|---|---|
| | | | | ಕ್ರೈಸ್ತ ನಾಮ | ಅಡ್ಡ ಹೆಸರು | | | | | |
| | ದಿನ | ತಿಂಗಳು | ವರ್ಷ | ಜೇಮ್ಸ್ ಮಾರ್ಥಾ | ವೈಟ್ ಡಂಕನ್ | ೨೫ ವರ್ಷಗಳು<br>೧೭ ವರ್ಷಗಳು | ವಿಧುರ<br>ಅವಿವಾಹಿತೆ | ಬಡಗಿ | ಆಗ್ರಾ<br>ಆಗ್ರಾ | ವಿಲಿಯಂಮ್ ವೈಟ್<br>ಜಾನ್ ಡಂಕನ್ |

.....................ನಲ್ಲಿ ವಿವಾಹವಾಯಿತು

ಈ ವಿವಾಹವನ್ನು.............. ಜೇಮ್ಸ್ ವೈಟ್ / ಮಾರ್ಥಾಡಂಕನ್ | ರಾದ ನಮ್ಮ ನಡುವೆ ಜಾನ್‌ಸ್ಮಿತ್ / ಜಾನ್‌ಗ್ರೀನ್ | ರಾದ ನಮ್ಮ ಸಮ್ಮುಖದಲ್ಲಿ

ಅನುಷ್ಠಾಪಿಸಲಾಯಿತು.

### ವಿವಾಹದ ಪ್ರಮಾಣಪತ್ರ

| ಸಂಖ್ಯೆ | ಯಾವಾಗ ವಿವಾಹವಾದುದು | | | ಪಕ್ಷಕಾರರ ಹೆಸರುಗಳು | | ವಯಸ್ಸು | ಸ್ಥಿತಿ | ದರ್ಜೆ ಅಥವಾ ವೃತ್ತಿ | ವಿವಾಹ ಕಾಲದಲ್ಲಿನ ವಾಸಸ್ಥಳ | ತಂದೆಯ ಹೆಸರು ಮತ್ತು ಅಡ್ಡ ಹೆಸರು |
|---|---|---|---|---|---|---|---|---|---|---|
| | | | | ಕ್ರೈಸ್ತ ನಾಮ | ಅಡ್ಡ ಹೆಸರು | | | | | |
| | ದಿನ | ತಿಂಗಳು | ವರ್ಷ | ಜೇಮ್ಸ್<br>ಮಾರ್ಥಾ | ವೈಟ್<br>ಡಂಕನ್ | ೨೫ ವರ್ಷಗಳು<br>೧೭ ವರ್ಷಗಳು | ವಿಧುರ<br>ಅವಿವಾಹಿತೆ | ಬಡಗಿ | ಆಗ್ರಾ<br>ಆಗ್ರಾ | ವಿಲಿಯಮ್‌ವೈಟ್<br>ಜಾನ್‌ಡಂಕನ್ |

.......................ನಲ್ಲಿ ವಿವಾಹವಾಯಿತು

ಈ ವಿವಾಹವನ್ನು ಜೇಮ್ಸ್‌ವೈಟ್ / ಮಾರ್ಥಾಡಂಕನ್ } ರಾದ ನಮ್ಮ ನಡುವೆ ಜಾನ್‌ಸ್ಮಿತ್ / ಜಾನಗ್ರೀವ್ } ರಾದ ನಮ್ಮ ಸಮಕ್ಷಮದಲ್ಲಿ

ವಿಧಿವತ್ತಾಗಿ ನೆರವೇರಿಸಲಾಯಿತು.

## ಅನುಸೂಚಿ V

(ನಿರಸಿತ ಅಧಿನಿಯಮಿತಿಗಳು) (ನಿರಸನಗೊಳಿಸುವ ಅಧಿನಿಯಮ-1938) (1938ರ 1ರ ಪ್ರಕರಣ 2 ಮತ್ತು ಅನುಸೂಚಿ ಭಾಗ 1ರ ಮೂಲಕ ನಿರಸನಗೊಳಿಸಲಾಗಿದೆ.)